# ನಮ್ಮ ಜನ
NAMMA JANA

ಸಂಪಾದಕರು: ದರ್ಶನ್.ಟಿ
Editor : DARSHAN.T

ಕನ್ನಡ ದಿನ ಪತ್ರಿಕೆ
Kannada Daily

ಸಂಪುಟ – 02 ಸಂಚಿಕೆ – 69 | ಆರ್‌ಎನ್‌ಐ ನಂ: ಕೆಎಆರ್‌ಕೆಎಎನ್/2023/88462 | ಚಿತ್ರದುರ್ಗ | ದಿನಾಂಕ: 28–09–2024 ಶನಿವಾರ | ಪುಟ: 4 | ಬೆಲೆ : ರೂ.2–00
Volume - 02 Issue - 69 | RNI No: KARKAN/2023/88462 | Chitradurga | Date: 28-09-2024 Saturday | Page: 4 | Price: Rs. 2-00



ಒಳಪುಟದ ಸುದ್ದಿಗಳು

ಜಿಲ್ಲೆಯ ಪ್ರವಾಸೋದ್ಯಮ ಅಭಿವೃದ್ಧಿಗೆ ಶ್ರಮಿಸಿ: ಅಪರ ಜಿಲ್ಲಾಧಿಕಾರಿ 2

ಮಕ್ಕಳ ಕಾಣೆ ಪತ್ತೆಗೆ ಗಡವು ನೀಡಿ ವರದಿ ಪಡೆದುಕೊಳ್ಳಿ: ನ್ಯಾ.ಎಂ.ವಿಜಯ್ ಸೂಚನೆ 3

ಒಮ್ಮೆ ಶಿಕ್ಷಕರಾದವರು ಜೀವನ ಪರ್ಯಂತ ಶಿಕ್ಷಕ 4



ಸುದ್ದಿ, ಜಾಹಿರಾತಿಗೆ 9686622252


## ಫಾಸ್ಟ್ ನ್ಯೂಸ್

### ಚಿತ್ರದುರ್ಗ ನಗರಸಭೆ: ಸೆ.30ರಂದು ಕೌನ್ಸಿಲ್ ಸಾಮಾನ್ಯ ಸಭೆ

» ಚಿತ್ರದುರ್ಗ

ಚಿತ್ರದುರ್ಗ ನಗರಸಭೆ ಕೌನ್ಸಿಲ್ ಸಾಮಾನ್ಯ ಸಭೆಯನ್ನು ಇದೇ ಸೆ.30ರಂದು ಬೆಳಿಗ್ಗೆ 11ಕ್ಕೆ ನಗರಸಭೆ ಕೌನ್ಸಿಲ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಚಿತ್ರದುರ್ಗ ನಗರಸಭೆ ಅಧ್ಯಕ್ಷೆ ಬಿ.ಎನ್.ಸುಮಿತಾ ಸಭೆಯ ಅಧ್ಯಕ್ಷತೆ ವಹಿಸುವರು ನಗರಸಭೆ ಪೌರಾಯುಕ್ತೆ ಎಂ.ರೇಣುಕಾ ತಿಳಿಸಿದ್ದಾರೆ.

### ಆಡಳಿತ ನ್ಯಾಯಾಧಿಕರಣದಲ್ಲಿ ತರಬೇತಿ: ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

» ಚಿತ್ರದುರ್ಗ

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ 2024–25ನೇ ಸಾಲಿಗೆ ಆಡಳಿತ ನ್ಯಾಯಾಧಿಕರಣದಲ್ಲಿ ತರಬೇತಿ ನೀಡಲು ಪರಿಶಿಷ್ಟ ಪಂಗಡದ ಪದವೀಧರರಿಂದ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಕೆ ಅವಧಿಯನ್ನು ಅ.7ರವರೆಗೆ ವಿಸ್ತರಿಸಲಾಗಿದೆ. ಆಸಕ್ತ ಅರ್ಹ ಅಭ್ಯರ್ಥಿಗಳು ಇಲಾಖೆ ವೆಬ್‌ಸೈಟ್ tw.kar.nic.in ನಲ್ಲಿ ಸಲ್ಲಿಸಿರುವ ಅರ್ಜಿಗಳನ್ನು ಜಿಲ್ಲಾ ಪರಿಶಿಷ್ಟ ವರ್ಗಗಳ ಕಚೇರಿಗೆ ಅ.7ರ ಸಂಜೆ 5.30ರೊಳಗೆ ಸಲ್ಲಿಸಲು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ

» ಚಿತ್ರದುರ್ಗ

2021ನೇ ಸಾಲಿನಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಣೆಗೊಂಡ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಯಾದ ಮತ್ತು ಆಯ್ಕೆಯಾಗದ ಪುಸ್ತಕಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದೆ. ಆಯ್ಕೆಯಾದ ಪುಸ್ತಕಗಳ ತಾತ್ಕಾಲಿಕ ಪಟ್ಟಿಯನ್ನು ಜಿಲ್ಲಾ ನಗರ ಕೇಂದ್ರ ಗ್ರಂಥಾಲಯಗಳ ಕೇಂದ್ರ ಕಚೇರಿಗಳಲ್ಲಿ ಮತ್ತು ಇಲಾಖೆ ವೆಬ್‌ಸೈಟ್ dpl.karnataka.gov.in ನಲ್ಲಿ ಪ್ರಕಟಿಸಲಾಗಿದೆ. ಈ ಪುಸ್ತಕಗಳ ಪ್ರದರ್ಶನವನ್ನು ಅಕ್ಟೋಬರ್ 4 ಮತ್ತು 5 ರಂದು ಬೆಂಗಳೂರಿನ ಪಶ್ಚಿಮ ವಲಯ, ಹಂಪಿನಗರ ನಗರ ಕೇಂದ್ರ ಗ್ರಂಥಾಲಯದಲ್ಲಿ ಏರ್ಪಡಿಸಲಾಗುವುದು. ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಗಾಗಿ ಸಲ್ಲಿಸಿದ ಲೇಖಕರು, ಲೇಖಕ ಪ್ರಕಾಶಕರು, ಪ್ರಕಾಶಕರು ಮತ್ತು ಪುಸ್ತಕ ಮಾರಾಟಗಾರರು ಈ ಬಗ್ಗೆ ಆಕ್ಷೇಪಣೆಗಳಿದ್ದಲ್ಲಿ ಅ.9ರ ಸಂಜೆ 5.30ರ ಒಳಗಾಗಿ ಆಯುಕ್ತರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, 4ನೇ ಮಹಡಿ, ಡಾ.ಬಿ.ಆರ್.ಅಂಬೇಡ್ಕರ್ ಬೀದಿ, ಬೆಂಗಳೂರು, ಇಲ್ಲಿಗೆ ಲಿಖಿತವಾಗಿ ಮನವಿಗಳನ್ನು ಸಲ್ಲಿಸಲು ಸೂಚಿಸಿದೆ. ನಂತರ ಬಂದಂತಹ ಮನವಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ ಎಂದು ಪ್ರಕಟಣೆ ತಿಳಿಸಿದೆ.

### ರೈಲ್ವೇ ಹಳಿ ನವೀಕರಣ: ರಸ್ತೆ ಮಾರ್ಗ ಬದಲಾವಣೆ

» ಚಿತ್ರದುರ್ಗ

ಚಿಕ್ಕಜಾಜೂರು ಅಮೃತಾಪುರ ನಡುವಿನ ರೈಲ್ವೆ ಹಳಿಯ ಲೆವಲ್ ಕ್ರಾಸಿಂಗ್ ಮತ್ತು ನವೀಕರಣ ಕಾರ್ಯದ ನಿಮಿತ್ತ ಸೆ.29 ಭಾನುವಾರ ಬೆಳಿಗ್ಗೆ 6 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಹೊಳಲ್ಕೆರೆ ದಾವಣಗೆರೆ ರಸ್ತೆ ಮಧ್ಯದ ರೈಲ್ವೇ ಗೇಟ್ ಮುಚ್ಚಲಾಗುತ್ತದೆ.

ರಸ್ತೆ ಸಂಚಾರಿಗಳ ಸುರಕ್ಷತೆ ದೃಷ್ಟಿಯಿಂದ ಈ ಕ್ರಮ ಕೈಗೊಳ್ಳಲಾಗಿದ್ದು, ಈ ಮಾರ್ಗವಾಗಿ ರಸ್ತೆ ಸಂಚಾರ ಮಾಡುವ ವಾಹನ ಸಂಚಾರರು, ಬಿ.ದುರ್ಗ, ಅಯ್ಯನಹಳ್ಳಿ, ಕಡೂರು, ಚಿಕ್ಕಜಾಜೂರು ಮಾರ್ಗದ ರಸ್ತೆಗಳಲ್ಲಿ ಸಂಚರಿಸುವಂತೆ ಚಿತ್ರದುರ್ಗ ರೈಲ್ವೇ ವಿಭಾಗದ ಹಿರಿಯ ವಿಭಾಗೀಯ ಇಂಜಿನಿಯರ್ ಪ್ರಕಟಣೆ ತಿಳಿಸಿದ್ದಾರೆ.

# ಹಿರಿಯ ನಾಗರಿಕರ ರಕ್ಷಣೆಗೆ ಕಾನೂನಿನ ಬಲವಿದೆ: ನ್ಯಾ. ಎಂ.ವಿಜಯ್ ಹೇಳಿಕೆ

» ಚಿತ್ರದುರ್ಗ

ಹಿರಿಯ ನಾಗರಿಕರ ಪಾಲನೆ ಪೋಷಣೆ ಮತ್ತು ಸಂರಕ್ಷಣಾ ಕಾಯ್ದೆ –2007 ಜಾರಿ ಮಾಡುವ ಮೂಲಕ ಹಿರಿಯ ನಾಗರಿಕರ ರಕ್ಷಣೆಗೆ ಕಾನೂನಿನ ಬಲ ನೀಡಲಾಗಿದೆ ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶ ಎಂ.ವಿಜಯ್ ಹೇಳಿದರು.



ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ವಿಕಲಚೇತನರು ಹಾಗೂ ಹಿರಿಯ ನಾಗರಿಕರು ಸಬಲೀಕರಣ ಇಲಾಖೆ ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದಲ್ಲಿ, ನಗರದ ಬಾಲಭವನದ ಸಭಾಂಗಣದಲ್ಲಿ, ಶುಕ್ರವಾರ ಹಿರಿಯ ನಾಗರಿಕರು ಹಾಗೂ ವಿಕಲಚೇತನರಿಗಾಗಿ ಏರ್ಪಡಿಸಲಾದ ಕಾನೂನು ನೆರವು ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಹಿರಿಯ ನಾಗರಿಕರ ರಕ್ಷಣೆಯ ಹೊಣೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಮೇಲಿದೆ. ಹಿರಿಯ ನಾಗರಿಕ ರಕ್ಷಣೆ ಕಾಯ್ದೆಯಡಿ ಉಪವಿಭಾಗಧಿಕಾರಿಗಳಿಗೆ ಹೆಚ್ಚಿನ ಅಧಿಕಾರ ನಿಡಲಾಗಿದೆ. ಆಸ್ತಿ ರಕ್ಷಣೆ ಜೊತೆಗೆ ಮಕ್ಕಳಿಂದ ಜೀವನಾಂಶ ಪಡಯಲು ಕಾಯ್ದೆಯಲ್ಲಿ ಹಿರಿಯ ನಾಗರಿಕರಿಗೆ ಅವಕಾಶ ನೀಡಲಾಗಿದೆ. ನ್ಯಾಯಧೀಶನಾಗಿ ಸೇವೆ ಆರಂಭಿಸಿದಾಗಿನಿಂದಲೂ ಇಲ್ಲಿಯವರೆಗೆ ನಾನು ಗಮನಿಸಿದ ಹಾಗೆ, ಯಾವುದೇ ತಂದೆ ತಾಯಿ ಆಸ್ತಿಗಾಗಿ ಮಕ್ಕಳ ಮೇಲೆ ಕೇಸು ದಾಖಲಿಸಿಲ್ಲ. ಆದರೆ ಮಕ್ಕಳೇ ತಂದೆ ತಾಯಿಯರ ಮೇಲೆ ಕೇಸು ದಾಖಲಿಸಿದ್ದಾರೆ. ಇದು ವಿಪರ್ಯಾಸದ ಸಂಗತಿಯಾಗಿದೆ ಎಂದು ಕಳವಳ ವ್ಯಕ್ತ ಪಡಿಸಿದರು.

ವಿಕಲಚೇತನರು ಸಹ ತಮ್ಮ ನ್ಯೂನತೆಗಳ ಬಗ್ಗೆ ಚಿಂತೆ ಮಾಡಬಾರದು. ಯಾರನ್ನು ದೂಷಣೆ ಮಾಡುವುದರಿಂದ ಪ್ರಯೋಜನವಾಗುವುದಿಲ್ಲ. ವಿಕಲಚೇತನರು ತಮ್ಮ ಮಾನಸಿಕ ಸಾಮರ್ಥ್ಯ ಹೆಚ್ಚಿಸಿಕೊಳ್ಳಬೇಕು. ಬೇರೆ ಬೇರೆ ರಂಗಗಳಲ್ಲಿ ಸಾಧನೆ ಮಾಡಬೇಕು ಎಂದು ನ್ಯಾಯಾಧೀಶ ಎಂ.ವಿಜಯ್ ಹೇಳಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಜೆ.ಸೋಮಶೇಖರ್ ಮಾತನಾಡಿ, ಹಿರಿಯ ನಾಗರಿಕರ ಹಿತರಕ್ಷಣೆಗಾಗಿ ಸರ್ಕಾರ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದೆ. ಹಿರಿಯ ನಾಗರಿಕರಿಗೆ ಪ್ರೀತಿ, ವಿಶ್ವಾಸ, ಗೌರವದಿಂದ ನಡೆಸಿಕೊಳ್ಳುವ ಮನಸ್ಥಿತಿ ಪ್ರತಿಯೊಬ್ಬರಲ್ಲಿಯೂ ಇರಬೇಕು.

ಸರ್ಕಾರಿ ಕಚೇರಿಗೆ ಆಗಮಿಸುವ ಹಿರಿಯ ನಾಗರಿಕರನ್ನು ಗೌರವದಿಂದ ನಡೆಸಿಕೊಳ್ಳಬೇಕು. ಹಿರಿಯ ನಾಗರಿಕರಿಗೆ ಸಮಸ್ಯೆಗೆ ತಕ್ಷಣ ಸ್ಪಂದಿಸುವ ಕೆಲಸ ಮಾಡಬೇಕು. ಹಿರಿಯ ನಾಗರಿಕರು ಬಹಳ ಒತ್ತಡದ ಜೀವನ ನಡೆಸುತ್ತಿದ್ದಾರೆ, ಹಾಗಾಗಿ ಅವರನ್ನು ಅತ್ಯಂತ ಗೌರವದಿಂದ ನಡೆಸಿಕೊಳ್ಳಬೇಕು ಎಂದು ಹೇಳಿದರು.

ಹಿರಿಯ ನಾಗರಿಕರು ಹಾಗೂ ವಿಶೇಷ ಚೇತನರ ಸುರಕ್ಷತೆಗಾಗಿ, ಪಾಲನೆ–ಪೋಷಣೆಗಾಗಿ ಹಿರಿಯ ನಾಗರಿಕರಿಗಾಗಿ ಪ್ರತ್ಯೇಕ ಇಲಾಖೆ ಹಾಗೂ ಕಾಯ್ದೆ ರೂಪಿಸಲಾಗಿದೆ. ಹಿರಿಯ ನಾಗರಿಕರು ಹಾಗೂ ವಿಶೇಷ ಚೇತನರ ಸಮಸ್ಯೆಗಳಿಗೆ ತ್ವರಿತವಾಗಿ ಪರಿಹಾರಕ್ಕೆ ಅಗತ್ಯ ಕ್ರಮವಹಿಸಲಾಗುವುದು ಎಂದು ಭರವಸೆ ನೀಡಿದರು.

ಮಹಿಳಾಮತ್ತುಮಕ್ಕಳಅಭಿವೃದ್ಧಿಇಲಾಖೆ ಉಪನಿರ್ದೇಶಕಿ ಭಾರತಿ ಆರ್ ಬಣಕಾರ್ ಮಾತನಾಡಿ, ವೃದ್ಧಾಪ್ಯ ಎಂಬುವುದು ಮಾನವನ ಅವಿಭಾಜ್ಯ ಅಂಗವಾಗಿದೆ. 60 ವರ್ಷ ಮೇಲ್ಪಟ್ಟವರನ್ನು ನಾವು ಹಿರಿಯ ನಾಗರಿಕರು ಎಂದು ಕರೆಯುತ್ತೇವೆ. ಹಿರಿಯ ನಾಗರಿಕರು ಮಾನಸಿಕವಾಗಿ ಮೊದಲೇ ಸಿದ್ದರಾಗಿದ್ದರೆ ವೃದ್ಧಾಪ್ಯ ಜೀವನ ಅಷ್ಟೊಂದು ಕಷ್ಟಕರವಾಗಿರುವುದಿಲ್ಲ. ವಯಸ್ಸಾದಂತೆ ಅನಾರೋಗ್ಯದ ಸಮಸ್ಯೆ ಜತೆಗೆ ದೈಹಿಕ ಹಾಗೂ ಮಾನಸಿಕ ಅನಾರೋಗ್ಯ ಹೆಚ್ಚಾಗಿರುತ್ತದೆ. ಇದರಿಂದ ಹಿರಿಯ ನಾಗರಿಕರು ಕುಗ್ಗುವುದು ಸಹಜ. ಇದನ್ನು ಧೈರ್ಯವಾಗಿ ಎದುರಿಸಲು ಮುಂಚಿತವಾಗಿ ಯೋಜನೆ ರೂಪಿಸಿದರೆ ಜೀವನವನ್ನು ಸುಖಮಯವಾಗಿ ನಡೆಸಲು ಅನುಕೂಲವಾಗಲಿದೆ ಎಂದು ಅಭಿಪ್ರಾಯವ್ಯಕ್ತಪಡಿಸಿದರು.

ಮಕ್ಕಳಿಗಾಗಿ ನಾವು ಆಸ್ತಿ ಮಾಡುತ್ತೇವೆ. ಆದರೆ ವೃದ್ಧಾಪ್ಯದ ಅವಧಿಯಲ್ಲಿ ಮಕ್ಕಳಿಂದ ನಾವು ನ್ಯಾಯಾಲಯದ ಮೊರೆ ಹೋಗಿ ಜೀವನಾಂಶ ಪಡೆಯುವ ಬದಲಾದ ಕುಟುಂಬ ವ್ಯವಸ್ಥೆಯಲ್ಲಿ ಹಿರಿಯ ನಾಗರಿಕರಿಗೆ ತುಂಬಾ ಸಮಸ್ಯೆಯಾಗುತ್ತಿದೆ. ಹಿರಿಯ ನಾಗರಿಕರಿಗೆ ಸ್ವಾತಂತ್ರ್ಯ, ನಿರ್ಧಾರ ಕೈಗೊಳ್ಳುವಿಕೆಗೆ ಒಪ್ಪಿಗೆ ನೀಡಬೇಕಾಗುತ್ತದೆ, ಸುರಕ್ಷಿತ ವಾತವರಣದ ಜತೆಗೆ ಕುಟುಂಬಕ್ಕೆ ಹಿರಿಯ ನಾಗರಿಕರ ಅನುಭವವನ್ನು ಸದುಪಯೋಗ ಪಡೆದುಕೊಳ್ಳಬೇಕು. ಯಾವುದೇ ಕಾರಣಕ್ಕೂ ಹಿರಿಯ ನಾಗರಿಕರನ್ನು ತಾತ್ಸಾರ ಮನೋಭಾವದಿಂದ ಕಾಣಬಾರದು ಎಂದು ಸಲಹೆ ನೀಡಿದರು.

ಹಿರಿಯ ನಾಗರಿಕರೊಂದಿಗೆ, ಪಾಲಕರೊಂದಿಗೆ ಮಕ್ಕಳ ಜೀವನ ನಡೆಸಬೇಕು. ಹಿರಿಯ ನಾಗರಿಕರು ಸಹ ಕುಟುಂಬ ನಿರ್ವಹಣೆಯಲ್ಲಿ ಅಗತ್ಯ ಸಹಕಾರ ನೀಡುತ್ತಾರೆ. ಮಕ್ಕಳ ಪಾಲನೆ–ಪೋಷಣೆಯಲ್ಲಿ ಹಿರಿಯ ನಾಗರಿಕರ ಪಾತ್ರ ಹಿರಿದು. ಹಿರಿಯ ನಾಗರಿಕರಿಗೆ ಘನತೆ ಜೀವನವನ್ನು ಮಾಡಲು ಕುಟುಂಬದ ಸದಸ್ಯರೆಲ್ಲರೂ ಅವಕಾಶ ಮಾಡಿಕೊಡಬೇಕು ಎಂದು ಹೇಳಿದರು.

ಕಾರ್ಯಗಾರದಲ್ಲಿ ಕಾನೂನು ನೆರವು ಅಭೀರಕ್ಷಕ ಎಂ.ಮೂರ್ತಿ ಹಾಗೂ ಘೋರ್ಥ್ ವೇವ್ ಪೌಂಡೇಶನ್ ರಿಯಾಜ್ ಅಹ್ಮದ್ ಹಿರಿಯ ನಾಗರಿಕರು ಹಾಗೂ ವಿಕಲಚೇತನರ ರಕ್ಷಣೆಯ ಕಾನೂನುಗಳ ಕುರಿತು ಉಪನ್ಯಾಸ ನೀಡಿದರು.

ಹಿರಿಯ ನಾಗರಿಕರ ಕಲ್ಯಾಣ ಸಂಘದ ಅಧ್ಯಕ್ಷ ರಂಗಪ್ಪ ರೆಡ್ಡಿ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಸವಿತಾ.ಸಿ, ವಕೀಲ ಬಸವರಾಜು, ಜಿಲ್ಲಾ ಅಂಗವಿಲರ ಕಲ್ಯಾಣಾಧಿಕಾರಿ ಸೊಮಶೇಖರ್ ಸೇರಿದಂತೆ ಮತ್ತಿರರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಶೇಂಗಾ ಬೆಳೆ ಮಳೆಕೊರತೆ ಹಿನ್ನೆಲೆಯಲ್ಲಿ ವಿಫಲ

## ಪೂರ್ಣಪ್ರಮಾಣದ ವಿಮೆ ನೀಡುವಂತೆ ಸರ್ಕಾರಕ್ಕೆ ಶಿಫಾರಸ್ಸು: ಜಿಲ್ಲಾಧಿಕಾರಿ ವೆಂಕಟೇಶ್ ಭರವಸೆ

» ಚಳ್ಳಕೆರೆ

ತಾಲ್ಲೂಕಿನಾದ್ಯಂತ ಮತ್ತೊಮ್ಮೆ ಮಳೆ ವಿಫಲವಾಗಿ ಈಗಾಗಲೇ ಬಿತ್ತನೆ ಮಾಡಿದ ಬಹುತೇಕ ಎಲ್ಲಾ ಜಮೀನಿಗಳಲ್ಲಿರುವ ಶೇಂಗಾ ಬೆಳೆ ಒಣಗಲು ಪ್ರಾರಂಭಿಸಿದೆ. ಈ ಬಗ್ಗೆ ಮಾಹಿತಿ ಪಡೆದ ಶಾಸಕ ಟಿ.ರಘುಮೂರ್ತಿ, ಜಿಲ್ಲಾಧಿಕಾರಿ ಟಿ.ವೆಂಕಟೇಶ್ ವಾಸ್ತಾಂಶವನ್ನು ಅರಿಯಲು ತಾಲ್ಲೂಕಿನ ನಗರಂಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನರಹರಿನಗರದ ರಿ, ಸರ್ವೆ, ನಂ 39 ಜಮೀನಲ್ಲಿರುವ ಒಣಗಿದ ಶೇಂಗಾ ಬೆಳೆಯನ್ನು ವೀಕ್ಷಿಸಿದರು.

ಜಮೀನಿನ ರೈತ ಪ್ರಕಾಶ್, ಮಂಜುನಾಥ ಮಾತನಾಡಿ, ಲಕ್ಷಾಂತರ ರೂಪಾಯಿ ಹಣ ಖರ್ಚು ಮಾಡಿ ಶೇಂಗಾ ಬಿತ್ತನೆ ಮಾಡಿದ್ದೆ. ಕಳೆದ ಸುಮಾರು 20 ದಿನಗಳಿಂದ ನಿರಂತರವಾಗಿ ಮಳೆ ಕೈಕೊಟ್ಟ ಹಿನ್ನೆಲೆಯಲ್ಲಿ ಜಮೀನಿನಲ್ಲಿದ್ದ ಶೇಂಗಾ ಬೆಳೆ ಒಣಗುತ್ತಿದೆ. ಇದರಿಂದ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ನೋವನ್ನು ಅನುಭವಿಸಬೇಕಾದ ಪರಿಸ್ಥಿತಿ ಉಂಟಾಗಿದೆ. ಸರ್ಕಾರದಿಂದ ಸೂಕ್ತ ಪರಿಹಾರವನ್ನು ಕೊಡಿಸುವಂತೆ ಮನವಿ ಮಾಡಿದರು. ಶಾಸಕ ಟಿ.ರಘುಮೂರ್ತಿ ಜಿಲ್ಲಾಧಿಕಾರಿಗಳೊಂದಿಗೆ ಮಾತನಾಡಿ, ಚಳ್ಳಕೆರೆ ತಾಲ್ಲೂಕಿನ ಶೇಂಗಾ ಸೇರಿದಂತೆ ಎಲ್ಲಾ ಬೆಳೆಗಳು ಒಣಗಿ ನೆಲಕಚ್ಚಿವೆ.

ಪುಟ 2



## ಪ್ರಮುಖ ಸುದ್ದಿ

### ಕಂದಾಯ ಸಚಿವ ಕೃಷ್ಣಭೈರೇಗೌಡ ಪ್ರಶಸ್ತಿ ಪ್ರಧಾನ

# ಡಿಸಿ ವೆಂಕಟೇಶ್‌ಗೆ ಅತ್ಯುತ್ತಮ ಕಂದಾಯ ಅಧಿಕಾರಿ ಪ್ರಶಸ್ತಿ

» ಚಿತ್ರದುರ್ಗ

ರಾಜ್ಯ ಸರ್ಕಾರದ ಕಂದಾಯ ಇಲಾಖೆಯ ವಿವಿಧ ಸೇವೆಗಳನ್ನು ಸಾರ್ವಜನಿಕರಿಗೆ ಅತ್ಯುತ್ತಮ ರೀತಿಯಲ್ಲಿ ತಲುಪಿಸಿರುವ ಚಿತ್ರದುರ್ಗ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಅವರಿಗೆ ಅತ್ಯುತ್ತಮ ಕಂದಾಯ ಅಧಿಕಾರಿ ಪ್ರಶಸ್ತಿ ಪ್ರಧಾನ ಮಾಡಲಾಯಿತು.

ಬೆಂಗಳೂರಿನ ವಿಕಾಸಸೌಧದಲ್ಲಿ ಶುಕ್ರವಾರ ನಡೆದ ಕಂದಾಯ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ಹಾಗೂ ಅಭಿನಂದನಾ ಸಭೆಯಲ್ಲಿ ಕಂದಾಯ ಇಲಾಖೆ ಸಚಿವ ಕೃಷ್ಣಭೈರೇಗೌಡ ಹಾಗೂ ಪ್ರಧಾನ ಕಾರ್ಯದರ್ಶಿ ರಶ್ಮಿ ವಿ ಮಹೇಶ್ ಅವರು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಅವರಿಗೆ "ವರ್ಷದ ಅತ್ಯುತ್ತಮ ಕಂದಾಯ ಅಧಿಕಾರಿ–2024ರ ಪ್ರಶಸ್ತಿ ನೀಡಿ ಗೌರವಿಸಿದರು.

ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಅವರು ಉತ್ತಮವಾಗಿ ಕಾರ್ಯನಿರ್ವಹಿಸುವ ಮೂಲಕ ಜನಸ್ನೇಹಿ ಹಾಗೂ ನಾಗರಿಕ ಸ್ನೇಹಿ ಸೇವೆಗಳನ್ನು ಸಲ್ಲಿಸಿದ್ದಾರೆ. ರಾಜ್ಯ ಸರ್ಕಾರದ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸಿ, ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗೆ ಹಲವಾರು ಯೋಜನೆಗಳನ್ನು ರೂಪಿಸಿದ್ದಾರೆ. ಈ ಎಲ್ಲಾ ಕೊಡುಗೆಗಳನ್ನು ಆಧರಿಸಿ, ಕಂದಾಯ ಇಲಾಖೆ ವತಿಯಿಂದ 2023–24ನೇ ಸಾಲಿಗೆ "ವರ್ಷದ ಅತ್ಯುತ್ತಮ ಕಂದಾಯ ಅಧಿಕಾರಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.





ತಾಲ್ಲೂಕಿನ ತಹಶೀಲ್ದಾರ್ ರೇಹಾನ್‌ಪಾಷರವರಿಗೆ ಕಂದಾಯ ಇಲಾಖೆ ವಿಪತ್ತು ನಿರ್ವಹಣೆ ಮತ್ತು ಆಯುಕ್ತರು ಕಂದಾಯ ಇಲಾಖೆ ಸಹಯೋಗದೊಂದಿಗೆ ಅತ್ಯುತ್ತಮ ಕಂದಾಯಾಧಿಕಾರಿ 2024ರ ಪ್ರಶಸ್ತಿಯನ್ನು ಬೆಂಗಳೂರಿನಲ್ಲಿ ಆಯೋಜಿಸಿದ್ದ ಕಂದಾಯ ಭವನದಲ್ಲಿ ಕೃಷಿ ಸಚಿವ ಕೃಷ್ಣಬೈರೇಗೌಡ ವಿತರಿಸಿದರು.

## ಫಾಸ್ಟ್ ನ್ಯೂಸ್

### ಅಕ್ಟೋಬರ್ 3 ರಂದು ತ್ರೈಮಾಸಿಕ ಸಭೆ

» ದಾವಣಗೆರೆ

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ಜನಾಂಗದವರ ಮೇಲಿನ ದೌರ್ಜನ್ಯ ತಡೆ ಕಾಯ್ದೆಯನ್ವಯ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿಯ ಮೂರನೇ ತ್ರೈಮಾಸಿಕ ಸಭೆಯನ್ನು ಅಕ್ಟೋಬರ್ 3 ರಂದು ಮಧ್ಯಾಹ್ನ 12 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಹಾಗೂ ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಕರಾದ ನಾಗರಾಜ್ ತಿಳಿಸಿದ್ದಾರೆ.

### ಸಾಕು, ಬೀದಿನಾಯಿಗಳಿಗೆ ಉಚಿತ ರೇಬೀಸ್ ಲಸಿಕೆ

» ದಾವಣಗೆರೆ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಪ್ರಾಣಿ ದಯಾ ಸಂಘ ಇವರ ಸಂಯುಕ್ತಾಶ್ರಯದಲ್ಲಿ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ವಿಸ್ತರಣಾ ಚಟುವಟಿಕೆ ಕಾರ್ಯಕ್ರಮದಡಿ ಸೆಪ್ಟಂಬರ್ 28 ರಿಂದ ಅಕ್ಟೋಬರ್ 10 ರವರೆಗೆ ನಗರ ಮತ್ತು ಗ್ರಾಮೀಣ ಪ್ರದೇಶಗಳ ವ್ಯಾಪ್ತಿಯಲ್ಲಿ ಶಾಲಾ, ಕಾಲೇಜುಗಳು, ಸಾರ್ವಜನಿಕ ಸ್ಥಳಗಳಲ್ಲಿ ಪ್ರಾಣಿಜನ್ಯ ರೋಗಗಳ ಅರಿವು ಕಾರ್ಯಕ್ರಮ ಮತ್ತು ಉಚಿತ ಹುಚ್ಚುನಾಯಿ ರೋಗ (ರೇಬೀಸ್) ಲಸಿಕಾ ಮಾಸಾಚರಣೆಯನ್ನು ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರು, ಪ್ರಾಣಿ ಪ್ರಿಯರು ಕಾರ್ಯಕ್ರಮದ ಸದುಪಯೋಗ ಪಡೆದುಕೊಂಡು ಸಂಪೂರ್ಣ ರೇಬೀಸ್ ನಿರ್ಮೂಲನೆಗೆ ಕೈಜೋಡಿಸಬೇಕು ಎಂದು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಉಪ ನಿರ್ದೇಶಕರಾದ ಡಾ. ಚಂದ್ರಶೇಖರ ಎಸ್. ಸುಂಕದ್ ತಿಳಿಸಿದ್ದಾರೆ

### ಕೇಂದ್ರ ರೈಲ್ವೆ, ಜಲಶಕ್ತಿ ಸಚಿವರ ಪ್ರವಾಸ

» ದಾವಣಗೆರೆ

ಕೇಂದ್ರ ರೈಲ್ವೆ ಹಾಗೂ ಜಲಶಕ್ತಿ ರಾಜ್ಯ ಸಚಿವರಾದ ವಿ.ಸೋಮಣ್ಣನವರು ಅಕ್ಟೋಬರ್ 2 ರಂದು ಮಧ್ಯಾಹ್ನ 3.30 ಕ್ಕೆ ದಾವಣಗೆರೆ ಆಗಮಿಸಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ತುಮಕೂರು-ಚಿತ್ರದುರ್ಗ-ದಾವಣಗೆರೆ ನೇರ ರೈಲು ಮಾರ್ಗದ ಭೂ ಸ್ವಾಧೀನ ಮತ್ತು ಶಿಕಾರಿಪುರ-ರಾಣೆಬೆನ್ನೂರು ಹೊಸ ರೈಲ್ವೆ ಮಾರ್ಗದ ಯೋಜನೆ ಕುರಿತು ಪ್ರಗತಿ ಪರಿಶೀಲನಾ ಸಭೆ ನಡೆಸಿ ಸಂಜೆ 5 ಗಂಟೆಗೆ ಹುಬ್ಬಳ್ಳಿಗೆ ಪ್ರಯಾಣಿಸುವರು.

### ಶೇಂಗಾ ಬೆಳೆಮಳೆಕೊರತೆ ಹಿನ್ನೆಲೆಯಲ್ಲಿ ವಿಫಲ

» ಮೊದಲ ಪುಟದಿಂದ

ರೈತರು ಬೆಳೆವಿಮೆ ಮಾಡಿಸಿದ್ದು ಕೆಲವೊಮ್ಮೆ ದಾಖಲಾತಿಗಳ ಸಲ್ಲಿಕೆ ವಿಳಂಬ ನೆಪವೊಡ್ಡಿ ರೈತರಿಗೆ ಬೆಳೆಪರಿಹಾರವನ್ನು ನೀಡಲಾಗುತ್ತಿಲ್ಲ. ಇದರಿಂದ ರೈತರು ವಂಚಿತರಾಗುತ್ತಾರೆ. ಸಾವಿರಾರು ರೈತರು ಈ ಬಗ್ಗೆ ತಮ್ಮ ಅಳಲುತೋಡಿಕೊಂಡಿದ್ದಾರೆ. ಆದ್ದರಿಂದ ಜಿಲ್ಲಾಧಿಕಾರಿಗಳಾದ ತಾವು ಕೃಷಿ, ಕಂದಾಯ ಇಲಾಖೆ ಅಧಿಕಾರಿಗಳಿಗೆ ನಿರ್ದಿಷ್ಟ ಸೂಚನೆ ನೀಡಿ ಯಾವುದೇ ರೈತರಿಗೆ ಅನ್ಯಾಯವಾಗದಂತೆ ಕ್ರಮಕೈಗೊಳ್ಳಬೇಕೆಂದರು.

ತಹಶೀಲ್ದಾರ್ ರೇಹಾನ್‌ಪಾಷ, ಕಂದಾಯಾಧಿಕಾರಿ ತಿಪ್ಪೇಸ್ವಾಮಿ, ಗ್ರಾಮ ಲೆಕ್ಕಿಗ ರಘುನಾಥಸಿಂಗ್, ಗ್ರಾಮ ಪಂಚಾಯಿತಿ ಸದಸ್ಯ ಎನ್.ಮಂಜುನಾಥ, ನಾಗರಾಜು, ಡಿವೈಎಸ್ಪಿ ಟಿ.ಬಿ.ರಾಜಣ್ಣ ಮುಂತಾದವರು ಉಪಸ್ಥಿತರಿದ್ದರು.

### ಅ.1ರಂದು ವಿಶ್ವ ಹಿರಿಯ ನಾಗರಿಕರ ದಿನಾಚರಣೆ

» ಚಿತ್ರದುರ್ಗ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘ ಹಾಗೂ ಹಿರಿಯ ನಾಗರಿಕರ ಕ್ಷೇತ್ರದಲ್ಲಿ ಶ್ರಮಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳ ವತಿಯಿಂದ ಅಕ್ಟೋಬರ್ 01ರಂದು ಬೆಳಿಗ್ಗೆ 11ಕ್ಕೆ ಚಿತ್ರದುರ್ಗ ನಗರದ ತ.ರಾ.ಸು ರಂಗಮಂದಿರದಲ್ಲಿ ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಹಮ್ಮಿಕೊಳ್ಳಲಾಗಿದೆ. ಯೋಜನೆ ಮತ್ತು ಸಾಂಖ್ಯಿಕ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ ಉದ್ಘಾಟಿಸುವರು. ಸಂಸದ ಗೋವಿಂದ ಎಂ ಕಾರಜೋಳ ಘನ ಉಪಸ್ಥಿತಿ ವಹಿಸುವರು. ಶಾಸಕ ಕೆ.ಸಿ.ವೀರೇಂದ್ರ ಪಪ್ಪಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಅತಿಥಿಗಳಾಗಿ ಶಾಸಕರಾದ ಬಿ.ಜಿ.ಗೋವಿಂದಪ್ಪ, ಟಿ.ರಘುಮೂರ್ತಿ, ಎನ್.ವೈ.ಗೋಪಾಲಕೃಷ್ಣ, ಡಾ.ಎಂ.ಚಂದ್ರಪ್ಪ, ವಿಧಾನ ಪರಿಷತ್ ಸದಸ್ಯರಾದ ಚಿದಾನಂದ ಎಂ ಗೌಡ, ಕೆ.ಎಸ್.ನವೀನ್, ಡಿ.ಟಿ.ಶ್ರೀನಿವಾಸ್, ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಅಧ್ಯಕ್ಷ ಕೆ.ಅನ್ವರ್ ಭಾಷಾ, ಕರ್ನಾಟಕ ದ್ರಾಕ್ಷರಸ ಮಂಡಳಿ ಅಧ್ಯಕ್ಷ ಡಾ.ಬಿ.ಯೋಗೇಶ್ ಬಾಬು, ಆದಿಜಾಂಬವ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಜಿ.ಎಸ್.ಮಂಜುನಾಥ್, ಕರ್ನಾಟಕ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷೆ ಸವಿತಾ ರಘು, ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಎಂ.ಕೆ.ತಾಜ್‌ಪೀರ್, ನಗರಸಭೆ ಅಧ್ಯಕ್ಷೆ ಸುಮಿತಾ.ಬಿ.ಎನ್, ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ಅಧ್ಯಕ್ಷ ಆರ್. ರಂಗಪ್ಪರೆಡ್ಡಿ ಭಾಗವಹಿಸಲಿದ್ದಾರೆ.

ವಿಶ್ವ ಪ್ರವಾಸೋದ್ಯಮ ದಿನಾಚರಣೆಯಲ್ಲಿ ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ಕರೆ

# ಜಿಲ್ಲೆಯ ಪ್ರವಾಸೋದ್ಯಮ ಅಭಿವೃದ್ಧಿಗೆ ಶ್ರಮಿಸಿ

» ಚಿತ್ರದುರ್ಗ

ಕೇರಳ ಸೇರಿದಂತೆ ಇತರೆ ರಾಜ್ಯಗಳು ಪ್ರವಾಸೋದ್ಯಮ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿವೆ. ಇದೇ ಮಾದರಿಯಲ್ಲಿ ರಾಜ್ಯದಲ್ಲೂ ಪ್ರವಾಸೋದ್ಯಮ ಬೆಳೆಯಬೇಕು. ಚಿತ್ರದುರ್ಗ ಪ್ರಮುಖ ಐತಿಹಾಸಿಕ ತಾಣವಾಗಿದೆ. ಇಲ್ಲಿನ ಪ್ರತಿಯೊಂದು ಕಲ್ಲು ಇತಿಹಾಸದ ದ್ಯೋತಕವಾಗಿವೆ. ಜಿಲ್ಲೆಯಲ್ಲಿ ಪ್ರವಾಸೋದ್ಯಮಕ್ಕೆ ಹೆಚ್ಚಿನ ಅವಕಾಶವಿದ್ದು, ಇದರ ಅಭಿವೃದ್ಧಿಗೆ ಪ್ರತಿಯೊಬ್ಬರು ಶ್ರಮಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ಕರೆ ನೀಡಿದರು.

ನಗರದ ಕಾಮನಬಾವಿ ಬಡಾವಣೆಯ ಮಯೂರ ದುರ್ಗ ಹೋಟೆಲ್‌ನಲ್ಲಿ ಶುಕ್ರವಾರ ಆಯೋಜಿಸಲಾದ ವಿಶ್ವ ಪ್ರವಾಸೋದ್ಯಮ ದಿನಾಚರಣೆ ಕಾರ್ಯಕ್ರಮ ಹಾಗೂ ಚಿತ್ರಕಲಾ ಸ್ಪರ್ಧೆಗೆ ಚಾಲನೆ ನೀಡಿ ಅವರು ಮಾತನಾಡಿದರು.




ಕೋಟೆಯ ಇತಿಹಾಸ ಸಾರುವಲ್ಲಿ ಪ್ರವಾಸಿ ಮಾರ್ಗದರ್ಶಿ ಕೆಲಸ ಬಹುಮುಖ್ಯವಾದದು. ಪ್ರವಾಸಿತಾಣಗಳಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಇಂದಿನ ಮಕ್ಕಳು ಪರಿಕ್ಷೆಗೆ ಪೂರಕವಾಗಿ ಅಧ್ಯಯನ ಮಾಡುತ್ತಾರೆ. ಆದರೆ ಜಿಲ್ಲೆಯ ಇತಿಹಾಸ ತಿಳಿದುಕೊಳ್ಳುವುದಿಲ್ಲ. ಮರೆತು ಹೋದ ಇತಿಹಾಸ ಕಟ್ಟಿಕೊಡುವ ಕೆಲಸವಾಗಬೇಕು ಎಂದರು.

ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಬಿ.ಹೆಚ್.ಶಶಿಕುಮಾರ್ ಮಾತನಾಡಿ, ಪ್ರವಾಸೋದ್ಯಮವು ಜಿಲ್ಲೆಯನ್ನು ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಹಾಗೂ ರಾಜಕೀಯವಾಗಿ ಸದೃಢಗೊಳಿಸಲು ಬಹುಮುಖ್ಯ ಪಾತ್ರವಹಿಸುತ್ತದೆ ಎಂದು ತಿಳಿಸಿ, ಪ್ರವಾಸಿ ಮಿತ್ರರು ಹಾಗೂ ಪ್ರವಾಸಿ ಗೈಡ್‌ಗಳ ಕೆಲಸವನ್ನು ಶ್ಲಾಘಿಸಿದರು.

ಇದೇ ಸಂದರ್ಭದಲ್ಲಿ ಪ್ರವಾಸಿ ಮಾರ್ಗದರ್ಶಿ ಜನಾರ್ಧನ್ ಅವರ ಶ್ರೀ ರಾಮಾಯಣ ಕಥಾನಕಗಳು ಪುಸ್ತಕ ಮತ್ತು ಮದಕರಿ ನಾಯಕರ ಸಂದೇಶ ಸಾರುವ ಹಾಡಿನ ಪೋಸ್ಟರ್‌ಅನ್ನು ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ಬಿಡುಗಡೆಗೊಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಗೃಹರಕ್ಷಕದಳ ಕಮಾಂಡೆಂಟ್ ಸಿ.ಕೆ.ಸಂಧ್ಯಾ, ಕೆಎಸ್‌ಟಿಡಿಸಿ ವ್ಯವಸ್ಥಾಪಕ ಚೇತನ್ ಸೇರಿದಂತೆ ಪ್ರವಾಸಿ ಮಿತ್ರರು ಹಾಗೂ ಪ್ರವಾಸಿ ಮಾರ್ಗದರ್ಶಿಗಳು, ಪ್ರವಾಸೋದ್ಯಮ ಇಲಾಖೆ ಸಿಬ್ಬಂದಿ ಇದ್ದರು.

# ದುರ್ಗೋತ್ಸವ ಆಚರಿಸುವಂತೆ ಸಿಎಂಗೆ ಮನವಿ

» ಚಿತ್ರದುರ್ಗ

ಐತಿಹಾಸಿಕ ಏಳು ಸುತ್ತಿನ ಕೋಟೆಯಿರುವ ಚಿತ್ರದುರ್ಗದಲ್ಲಿ ದುರ್ಗೋತ್ಸವ ಆಚರಿಸುವಂತೆ ಕರುನಾಡ ವಿಜಯಸೇನೆ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಶುಕ್ರವಾರ ಪ್ರತಿಭಟನೆ ನಡೆಸಿ ಅಪರ ಜಿಲ್ಲಾಧಿಕಾರಿ ಮೂಲಕ ರಾಜ್ಯದ ಮುಖ್ಯಮಂತ್ರಿಗೆ ಮನವಿ ಸಲ್ಲಿಸಲಾಯಿತು.

ರಾಜಾವೀರ ಮದಕರಿನಾಯಕ, ವೀರವನಿತೆ ಒನಕೆ ಓಬವ್ವಳ ನಾಡು ಚಿತ್ರದುರ್ಗದಲ್ಲಿ ದುರ್ಗೋತ್ಸವ ಆಚರಿಸಿ ವರ್ಷಗಳೆ ಉರುಳಿದೆ. ಮೈಸೂರು ದಸರಾ, ಹಂಪಿ ಉತ್ಸವ

ಕೊಡಗು ಉತ್ಸವ, ಕಿತ್ತೂರು ಉತ್ಸವ ಆಚರಣೆಗೆ ಕೋಟಿಗಟ್ಟಲೆ ಹಣ ವ್ಯಯಿಸುತ್ತಿರುವ ಸರ್ಕಾರ ಚಿತ್ರದುರ್ಗ ಉತ್ಸವ ಏಕೆ ಆಚರಿಸುತ್ತಿಲ್ಲ. ಅನೇಕ ಬಾರಿ ಪ್ರತಿಭಟನೆ ನಡೆಸಿ ಒತ್ತಾಯಿಸಿದ್ದೇವೆ. ರಾಜಕಾರಣಿಗಳಿಗೆ ಆಸಕ್ತಿ ಇಲ್ಲದಿರುವುದೇ ದುರ್ಗೋತ್ಸವ ನಡೆಯದಿರಲು ಕಾರಣ ಎಂದು ಪ್ರತಿಭಟನಾನಿರತರು ಆಪಾದಿಸಿದರು.




ವಿಶ್ವಹಿಂದೂ ಪರಿಷತ್, ಭಜರಂಗದಳದವರು ಕಳೆದ ಹದಿನೆಂಟು ವರ್ಷಗಳಿಂದಲೂ ನಿರಂತರವಾಗಿ ಹಿಂದೂ ಮಹಾ ಗಣಪತಿ ಉತ್ಸವವನ್ನು ಆಚರಿಸಿಕೊಂಡು ಬರುತ್ತಿದ್ದಾರೆ. ದುರ್ಗೋತ್ಸವ ಆಚರಣೆಗೆ ಏಕೆ ಕರ್ನಾಟಕ ಸರ್ಕಾರ ಮನಸ್ಸು ಮಾಡುತ್ತಿಲ್ಲ. ಡಿಸೆಂಬರ್ ಒಳಗೆ ದುರ್ಗೋತ್ಸವ ಆಚರಿಸುವಂತೆ ಪ್ರತಿಭಟನೆಯ ನೇತೃತ್ವ ವಹಿಸಿದ್ದ ಕರುನಾಡ ವಿಜಯಸೇನೆ ಜಿಲ್ಲಾಧ್ಯಕ್ಷ ಕೆ.ಟಿ.ಶಿವಕುಮಾರ್ ಒತ್ತಾಯಿಸಿದರು.

ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ವೀಣಗೌರಣ್ಣ, ಉಪಾಧ್ಯಕ್ಷೆ ರತ್ನಮ್ಮ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗೋಪಿನಾಥ್ ಎಸ್. ಕಾರ್ಯದರ್ಶಿ ಜಗದೀಶ್ ಉಪಾಧ್ಯಕ್ಷ ಮುಜಾಹಿದ್, ವಿದ್ಯಾರ್ಥಿ ಘಟಕದ ಅಖಿಲೇಶ್, ನಗರಾಧ್ಯಕ್ಷ ಅವಿನಾಶ್, ಯರ್ರಿಸ್ವಾಮಿ, ನಾಗರಾಜ್ ಕಮಲ, ಸುರೇಶ್, ಹರೀಶ್ಕುಮಾರ್ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

# ಮೊಳಕಾಲ್ಮುರು ತಾ.ಪಂ ವ್ಯವಸ್ಥಾಪಕ ಅಮಾನತು

» ಚಿತ್ರದುರ್ಗ

ಪದೇ ಪದೇ ಕಚೇರಿ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗುವುದು ಹಾಗೂ ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರಿದ ಕಾರಣಕ್ಕಾಗಿ ಮೊಳಕಾಲ್ಮುರು ತಾಲ್ಲೂಕು ಪಂಚಾಯಿತಿ ವ್ಯವಸ್ಥಾಪಕ ಅರುಣ್ ಕುಮಾರ್ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಜೆ.ಸೋಮಶೇಖರ್ ಆದೇಶಿಸಿದ್ದಾರೆ. ಮೊಳಕಾಲ್ಮುರು ತಾ.ಪಂ ವ್ಯವಸ್ಥಾಪಕ ಅರುಣ್ ಕುಮಾರ್ ಅವರು 2024ರ ಆಗಸ್ಟ್ 08 ರಿಂದ 13 ರವರೆಗೆ ಅನಧಿಕೃತ ಗೈರು ಹಾಜರಾಗಿದ್ದು, ಈ ಕುರಿತಂತೆ ನೌಕರರಿಗೆ ಕಾರಣ ಕೇಳಿ ನೋಟೀಸ್ ಜಾರಿ ಮಾಡಲಾಗಿರುತ್ತದೆ. ಮುಂದುವರೆದು 2024ರ ಆಗಸ್ಟ್ 14 ರಿಂದ 21 ರವರೆಗೆ ಮೇಲಾಧಿಕಾರಿಗಳ ಅನುಮತಿ ಪಡೆಯದೇ ಪುನಃ ಕರ್ತವ್ಯಕ್ಕೆ ಗೈರು ಹಾಜರಾಗಿರುತ್ತಾರೆ. ಈ ನೌಕರರು ಮೇಲಾಧಿಕಾರಿಗಳ ಅನುಮತಿ ಪಡೆಯದೇ ಪದೇ ಪದೇ ಕರ್ತವ್ಯಕ್ಕೆ ಗೈರು ಹಾಜರಾಗಿರುವುದರಿಂದ ಈ ನೌಕರರ ಮೇಲೆ ಶಿಸ್ತು ಕ್ರಮ ಜರುಗಿಸುವಂತೆ ಮೊಳಕಾಲ್ಮುರು ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿಗಳು ವರದಿ ಸಲ್ಲಿಸಿರುತ್ತಾರೆ. ಈ ಎಲ್ಲ ಅಂಶಗಳನ್ನು ಪರಿಶೀಲಿಸಿ, ಕೆಸಿಎಸ್ (ಸಿ.ಸಿ.ಎ) ನಿಯಮಾವಳಿ-1957ರ ನಿಯಮ-10(1) ರನ್ವಯ ಮೊಳಕಾಲ್ಮುರು ತಾ.ಪಂ ವ್ಯವಸ್ಥಾಪಕ ಅರುಣ್ ಕುಮಾರ್ ಅವರ ವಿರುದ್ಧ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ತಕ್ಷಣದಿಂದಲೇ ಜಾರಿಗೆ ಬರುವಂತೆ ಸೇವೆಯಿಂದ ಅಮಾನತುಗೊಳಿಸಿದ್ದು, ಅಮಾನತು ಅವಧಿಯಲ್ಲಿ ಪ್ರಾಧಿಕಾರದ ಅನುಮತಿ ಪಡೆಯದೇ ಕೇಂದ್ರಸ್ಥಾನ ಬಿಡುವಂತಿಲ್ಲ ಮತ್ತು ಅನ್ಯ ಉದ್ಯೋಗದಲ್ಲಿ ತೊಡಗುವಂತಿಲ್ಲ ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಶಿಸ್ತು ಪ್ರಾಧಿಕಾರಿ ಎಸ್.ಜೆ.ಸೋಮಶೇಖರ್ ಆದೇಶಿಸಿದ್ದಾರೆ.

# ಗ್ರಾಮ ಆಡಳಿತಾಧಿಕಾರಿಗಳ ಅನಿರ್ದಿಷ್ಟಾವಧಿ ಮುಷ್ಕರ



» ಚಿತ್ರದುರ್ಗ

ಮೊಬೈಲ್ ವೆಬ್ ತಂತ್ರಾಂಶಗಳ ಮೂಲಕ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಹೆಚ್ಚಿನ ಒತ್ತಡವಾಗುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸುತ್ತಿರುವ ಕರ್ನಾಟಕ ರಾಜ್ಯ ಗ್ರಾಮ ಲೆಕ್ಕಾಧಿಕಾರಿಗಳ ಸಂಘದವರು ಶುಕ್ರವಾರ ಜಿಲ್ಲಾಧಿಕಾರಿ ಕಚೇರಿ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು. ಕಂದಾಯ ಇಲಾಖೆ ಸರ್ಕಾರದಿಂದ ಅಭಿವೃದ್ದಿಪಡಿಸಿರುವ ಮೊಬೈಲ್ ತಂತ್ರಾಂಶಗಳಿಂದ ಗ್ರಾಮ ಲೆಕ್ಕಾಧಿಕಾರಿಗಳು ಕೆಲಸ ನಿರ್ವಹಿಸುವುದು ಕಷ್ಟವಾಗುತ್ತಿದೆ. ಮೊಬೈಲ್ ತಂತ್ರಾಂಶಗಳ ಕೆಲಸದ ವಿಚಾರವಾಗಿ ಇದುವರೆವಿಗೂ ಆಗಿರುವ ಎಲ್ಲಾ ಅಮಾನತ್ತುಗಳನ್ನು ರದ್ದುಪಡಿಸಿ ರಜಾ ದಿನಗಳಲ್ಲಿ ಯಾವುದೇ ಕಾರಣಕ್ಕೂ ಕರ್ತವ್ಯಕ್ಕೆ ಹಾಜರಾಗುವಂತೆ ಒತ್ತಡ ಹೇರಬಾರದು. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಖಾಲಿಯಿರುವ ಪ್ರಥಮ ದರ್ಜೆ ಸಹಾಯಕ/ರಾಜಸ್ವ ನಿರೀಕ್ಷಕರ ಹುದ್ದೆಗಳಿಗೆ ತಕ್ಷಣವೆ ಪದೋನ್ನತಿ ನೀಡುವಂತೆ ಪ್ರತಿಭಟನಾನಿರತ ಗ್ರಾಮ ಲೆಕ್ಕಾಧಿಕಾರಿಗಳು ಸರ್ಕಾರವನ್ನು ಒತ್ತಾಯಿಸಿದರು. ಕರ್ನಾಟಕ ರಾಜ್ಯ ಗ್ರಾಮ ಲೆಕ್ಕಾಧಿಕಾರಿಗಳ ಸಂಘದ ರಾಜ್ಯ ಗೌರವಾಧ್ಯಕ್ಷ ವಿ.ಪಾಂಡುರಂಗಪ್ಪ, ಗ್ರಾಮ ಆಡಳಿತಾಧಿಕಾರಿಗಳ ಸಂಘದ ಜಿಲ್ಲಾಧ್ಯಕ್ಷ ಮಾಲತೇಶ ಮುದ್ದಜ್ಜಿ ಕಂದಾಯ ಇಲಾಖೆ ಜಿಲ್ಲಾಧ್ಯಕ್ಷ ಬಿ.ಎಸ್.ಸಿದ್ದೇಶಿ, ತಾಲ್ಲೂಕು ಅಧ್ಯಕ್ಷ ಸಂಪತ್ಕುಮಾರ್ ಎಂ.ಪಿ. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹಮದ್ ಇರ್ಫಾನ್, ತಾಲ್ಲೂಕಿನ ಎಲ್ಲಾ ಗ್ರಾಮ ಆಡಳಿತಾಧಿಕಾರಿಗಳು ಗ್ರಾಮ ಸಹಾಯಕರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

# 6 ದಿನಗಳ ಮೊಟ್ಟೆ ವಿತರಣೆಗೆ ಚಾಲನೆ



» ಚಿತ್ರದುರ್ಗ

ನಗರದ ಕೋಟೆ ಪ್ರೌಢ ಶಾಲೆಯಲ್ಲಿ ಗುರುವಾರ ವಾರದ ಆರು ದಿನಗಳು ಮಕ್ಕಳಿಗೆ ಮೊಟ್ಟೆ ನೀಡುವ ಕಾರ್ಯಕ್ರಮಕ್ಕೆ ಶಾಸಕ ಕೆ.ಸಿ.ವಿರೇಂದ್ರ ಪಪ್ಪಿ ಚಾಲನೆ ನೀಡಿದರು. ಕರ್ನಾಟಕ ಸರ್ಕಾರ ಹಾಗೂ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಸಹಭಾಗಿತ್ವದಲ್ಲಿ ಪ್ರೌಢ ಹಾಗೂ ಪ್ರಾಥಮಿಕ ಶಾಲಾ ಮಕ್ಕಳ ಪೌಷ್ಟಿಕತೆ ವೃದ್ಧಿಸಲು ಮೊಟ್ಟೆ, ಚಿಕ್ಕೆ ಹಾಗೂ ಬಾಳೆಹಣ್ಣು ನೀಡಲಾಗುತ್ತಿದೆ. ಕಾರ್ಯಕ್ರಮದಲ್ಲಿ ನಗರಸಭೆ ಅಧ್ಯಕ್ಷೆ ಸುಮಿತಾ ರಘು, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ತಾಜ್‌ಪೀರ್, ಸರ್ಕಾರ ಗ್ಯಾರೆಂಟಿ ಯೋಜನೆಗಳ ಉಪಾಧ್ಯಕ್ಷ ಡಿ.ಎನ್.ಮೈಲಾರಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ ನಾಗಭೂಷಣ್ ಸೇರಿದಂತೆ ಶಾಲೆ ಮುಖ್ಯೋಪಧ್ಯಾಯರು ಉಪಸ್ಥಿತರಿದ್ದರು.

**ಪ್ರಮುಖ ಸುದ್ದಿ**

ರಾಷ್ಟ್ರೀಯ ಪೋಷಣ್ ಮಾಸಾಚರಣೆ ಜಾಗೃತಿ ಕಾರ್ಯಕ್ರಮ

# ಪೌಷ್ಟಿಕ ಆಹಾರ ಸೇವನೆಯಿಂದ ಉತ್ತಮ ಆರೋಗ್ಯ

» ಚಿತ್ರದುರ್ಗ

ಪೌಷ್ಟಿಕ ಆಹಾರ ಸೇವನೆಯಿಂದ ಆರೋಗ್ಯವನ್ನು ಉತ್ತಮವಾಗಿ ಕಾಪಾಡಿಕೊಳ್ಳಬಹುದು. ಸಮತೋಲಿತ ಆಹಾರದ ಜೊತೆ ಆಯಾ ಋತುಮಾನಕ್ಕೆ ಲಭ್ಯವಾಗುವ ಸೊಪ್ಪು ಹಣ್ಣು ಮತ್ತು ತರಕಾರಿಗಳನ್ನು ಗರ್ಭಿಣಿಯರು ಹೆಚ್ಚಾಗಿ ಸೇವಿಸಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮೇಲ್ವಿಚಾರಕಿ ಆರ್.ವಿನೋದಮ್ಮ ಹೇಳಿದರು.

ಗ್ರಾಮದ ವೇದಾಂತ ಲಿಮಿಟೆಡ್ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಭರಮಸಾಗರ ಶಿಶು ಅಭಿವೃದ್ಧಿ ಯೋಜನೆ ಇಲಾಖೆ ಸಂಯುಕ್ತಾಶ್ರಯದಲ್ಲಿ ಬುಧವಾರ ಮದಕರಿಪುರ ಗ್ರಾಮದಲ್ಲಿ ಆಯೋಜಿಸಲಾದ ರಾಷ್ಟ್ರೀಯ ಪೋಷಣ್ ಮಾಸಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಾರ್ವಜನಿಕರು ಅವಶ್ಯಕತೆ ಇರುವ ತಾಜಾ ಸೊಪ್ಪು, ತರಕಾರಿಗಳನ್ನು ತಮ್ಮ ಕೈತೋಟಗಳಲ್ಲಿ ಬೆಳೆಸಿಕೊಳ್ಳಬೇಕು.



ಇದೇ ಸಂದರ್ಭದಲ್ಲಿ ಪೌಷ್ಟಿಕ ಆಹಾರ ತಯಾರಿಸಿಕೊಳ್ಳುವ ವಿಧಾನ, ಏಕದಳ, ದ್ವಿದಳ, ಸಿರಿ ಧಾನ್ಯ ಹಾಗೂ ಮೊಳಕೆ ಕಾಳುಗಳ ಬಳಕೆ ಮತ್ತು ಗರ್ಭಿಣಿ ಬಾಣಂತಿಯರ ಹಾರೈಕೆ ಬಗ್ಗೆ ತಿಳಿಸಿದರು. ಗರ್ಭಿಣಿ ಬಾಣಂತಿ ಮಕ್ಕಳಲ್ಲಿ ಕಾಡುವ ಅಪೌಷ್ಟಿಕತೆ ಮತ್ತು ಮರಣ ಪ್ರಮಾಣವನ್ನು ಕಡಿಮೆ ಮಾಡುವಲ್ಲಿ ಪೌಷ್ಟಿಕ ಆಹಾರ ಎಷ್ಟು ಮುಖ್ಯ ಕುರಿತು ಮಾಹಿತಿ ನೀಡಿದ ಅವರು, ಬಾಲ್ಯ ವಿವಾಹದಿಂದಾಗುವ ದುಷ್ಪರಿಣಾಮ, ಬಾಲ್ಯ ವಿವಾಹ ಶಿಕ್ಷಾರ್ಹ ಅಪರಾಧ, ದಂಡ & ಶಿಕ್ಷೆ, ಬಾಲ್ಯ ವಿವಾಹ ನಿಷೇಧ ಅಧಿಕಾರಿಗಳ ಬಗ್ಗೆ ತಿಳಿಸಿ, ಬಾಲ್ಯ ವಿವಾಹ ಪ್ರಕರಣಗಳು ಕಂಡು ಬಂದಲ್ಲಿ ತಕ್ಷಣ 1098ಕ್ಕೆ ಕರೆಮಾಡಲು ಮನವಿ ಮಾಡಿದರು.

ಗ್ರಾಮ ಪಂಚಾಯ್ತಿ ಅಧ್ಯಕ್ಷೆ ಕೋಮಲಾಕ್ಷಿ ಮಾತನಾಡಿ, ಹೆಣ್ಣು ಅಬಲೆ ಅಲ್ಲ ಸಬಲಳು, ಎಲ್ಲಾ ರೀತಿಯಲ್ಲೂ ಅವಳ ಪಾತ್ರ ಮಹತ್ವದ್ದಾಗಿದೆ. ಕುಟುಂಬದಲ್ಲಿ ಹೆಣ್ಣಿನ ಪಾತ್ರ ಪ್ರಮುಖವಾದದ್ದು. ಹೆಣ್ಣು ಕುಟುಂಬಕ್ಕೋಸ್ಕರ ತನ್ನ ಆರೋಗ್ಯವನ್ನು ಲೆಕ್ಕಿಸದೇ ಕುಟುಂಬ ನಿರ್ವಹಣೆಯಲ್ಲಿ ಸಫಲತೆ ಕಾಣುತ್ತಾಳೆ ಎಂದರು.

ಮಾತೃ ವಂದನಾ ಜಿಲ್ಲಾ ಸಂಯೋಜಕ ಚೇತನ್ ಮಾತನಾಡಿದರು. ಇದೇ ಸಂದರ್ಭದಲ್ಲಿ ಐದು ಜನ ಗರ್ಭಿಣಿಯರಿಗೆ ಸೀಮಂತ ಕಾರ್ಯವನ್ನು ನೆರವೇರಿಸಿ, ಮಕ್ಕಳಿಗೆ ಅನ್ನ ಪ್ರಾಶನ ಮತ್ತು ಫಲಾನುಭವಿಗಳಿಗೆ ಸುಕನ್ಯಾ ಸಮೃದ್ಧಿ ಪಾಸ್ ಬುಕ್ ವಿತರಸಲಾಯಿತು. ಕಾರ್ಯಕ್ರಮದಲ್ಲಿ ವೇದಾಂತ ಲಿಮಿಟೆಡ್‌ನ ಡಾಕ್ಟರ್ ಶಶಾಂಕ್, ಭಾಗ್ಯಜ್ಯೋತಿ ಶಾಲಾಮುಖ್ಯೋಪಾಧ್ಯಾಯರಾದ ಲೀಲಾವತಿ, ಸಿ.ಹೆಚ್.ಓ ಪುನೀತ್ ಕುಮಾರ್, ಆಯುರ್ವೇದಿಕ್ ವೈದ್ಯಾಧಿಕಾರಿ ಡಾ.ಜಗದೀಶ್, ತಾ.ಪಂ. ಮಾಜಿ ಅಧ್ಯಕ್ಷ ಎಂ.ಎನ್. ಗಂಗಾಧರಪ್ಪ, ಗ್ರಾ.ಪಂ. ಸದಸ್ಯರಾದ ಕುಬೇರಮ್ಮ ರಮೇಶ್, ರುದ್ರೇಶ್, ಸಿ.ಓ.ವೀರಮ್ಮ ವೇದಾಂತ ವೆಂಕಟೇಶ್, ಶಿಲ್ಪ ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು, ಪೋಷಕರು ಗ್ರಾಮಸ್ಥರು ಇದ್ದರು.

## ಫಾಸ್ಟ್ ನ್ಯೂಸ್

### ಅ.2ರಂದು ಗಾಂಧಿ ಜಯಂತಿ: ಮಾಂಸ ಮಾರಾಟ ನಿಷೇಧ

» **ಚಿತ್ರದುರ್ಗ**

ಅಕ್ಟೋಬರ್ 2ರಂದು ಗಾಂಧಿ ಜಯಂತಿ ಪ್ರಯುಕ್ತ ಮಾಂಸರಹಿತ ದಿನವೆಂದು ಘೋಷಿಸಿದ್ದು, ಅಂದು ಜಿಲ್ಲೆಯಾದ್ಯಂತ ಯಾವುದೇ ಸ್ಥಳದಲ್ಲಿ ಪ್ರಾಣಿ ವಧೆ, ಮಾಂಸ ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ. ಅಕ್ಟೋಬರ್ 02ರಂದು ಗಾಂಧಿ ಜಯಂತಿ ಪ್ರಯುಕ್ತ ಮಾಂಸರಹಿತ ದಿನವಾಗಿರುವುದರಿಂದ ಪ್ರಾಣಿ ವಧೆ, ಮಾಂಸ ಮಾರಾಟ ಮಾಡದಂತೆ ಜಿಲ್ಲಾ ಪ್ರಾಣಿದಯಾ ಸಂಘದ ಸದಸ್ಯ ಕಾರ್ಯದರ್ಶಿಗಳು ಹಾಗೂ ಪಶುಪಾಲನಾ ಮತ್ತು ಪಶುವೈದ್ಯಕೀಯ ಇಲಾಖೆ ಸೇವಾ ಇಲಾಖೆ ಉಪನಿರ್ದೇಶಕರು ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

### ಪ್ರಾದೇಶಿಕ ಎಣ್ಣೆಬೀಜ ಬೆಳೆಗಾರರ ಸಹಕಾರ ಸಂಘ ನಿರ್ದೇಶಕರಾಗಿ ಜಿ.ಎಸ್.ದೇವರಾಜರೆಡ್ಡಿ ಅವಿರೋಧ ಆಯ್ಕೆ.


» **ಚಳ್ಳಕೆರೆ**



ತಾಲ್ಲೂಕಿನ ರಾಮಜೋಗಿಹಳ್ಳಿ ಗ್ರಾಮದ ಪ್ರಗತಿಪರ ರೈತ ಜಿ.ಎಸ್. ದೇವರಾಜರೆಡ್ಡಿ ಪ್ರಾದೇಶಿಕ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘಗಳ ಒಕ್ಕೂಟ ಜಿಲ್ಲಾ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾದರು. ಅವರು, ಈ ಬಗ್ಗೆ ಮಾಹಿತಿ ನೀಡಿ, ಜಿಲ್ಲಾ ಎಣ್ಣೆ ಬೀಜಬೆಳೆಗಾರರ ಸಹಕಾರ ಸಂಘದ ನಿರ್ದೇಶಕರ ಒಂದು ಸ್ಥಾನಕ್ಕಾಗಿ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ಕಾರಣ, ಕಳೆದ ಹಲವಾರು ವರ್ಷಗಳಿಂದ ಈ ಭಾಗದ ಪ್ರಗತಿಪರ ದಾಳಿಂಬೆ ಬೆಳೆಗಾರರಾಗಿ ಅವರು ಗುರುತಿಸಿಕೊಂಡಿದ್ದರು.

### ಕಲ್ಲಿದ್ದಲು, ಗಣಿ ಮತ್ತು ಉಕ್ಕು ಇಲಾಖೆ ಸ್ಥಾಯಿ ಸಮಿತಿ ಸದಸ್ಯರಾಗಿ ಸಂಸದ ಕಾರಜೋಳ

» **ಚಿತ್ರದುರ್ಗ**



18ನೇ ಲೋಕಸಭೆಯಲ್ಲಿ ಚಿತ್ರದುರ್ಗ ಲೋಕಸಭಾ ಸದಸ್ಯರಾದ ಗೋವಿಂದ ಎಂ. ಕಾರಜೋಳರವರನ್ನು ಸಂಸತ್ತಿನ ಕಲ್ಲಿದ್ದಲು, ಗಣಿ ಮತ್ತು ಉಕ್ಕು ಇಲಾಖೆಯ ಸ್ಥಾಯಿ ಸಮಿತಿಯ ಸದಸ್ಯರನ್ನಾಗಿ ಲೋಕಸಭಾ ಸ್ಪೀಕರಾದ ಓಂ ಬಿರ್ಲಾರವರು ನೇಮಕ ಮಾಡಿರುತ್ತಾರೆ. ಈ ಸ್ಥಾಯಿ ಸಮಿತಿಯಲ್ಲಿ 10 ಜನ ರಾಜ್ಯ ಸಭಾ ಸದಸ್ಯರು ಹಾಗೂ 21 ಜನ ಲೋಕಸಭಾ ಸದಸ್ಯರುಗಳು ಕಾರ್ಯನಿರ್ವಹಿಸಲಿದ್ದು, ಈ ಸ್ಥಾಯಿ ಸಮಿತಿಯ ಅಧ್ಯಕ್ಷರನ್ನಾಗಿ ಅನುರಾಗ್ ಸಿಂಗ್ ಠಾಕೂರ್‌ರವರನ್ನು ನೇಮಕ ಮಾಡಲಾಗಿದೆ.

### ಹೊಸದುರ್ಗ: ಇಂದು ಉಚಿತ ನೇತ್ರ ತಪಾಸಣೆ

» **ಹೊಸದುರ್ಗ**

ಶ್ರೀ ಶಿರಡಿ ಸಾಯಿಬಾಬಾ ಟ್ರಸ್ಟ್ (ರಿ) ಶ್ರೀ ಗಣೇಶ ಸದನ ಟ್ರಸ್ಟ್ (ರಿ) ಶ್ರೀ ವಿನಾಯಕ ಸ್ವಾಮಿ ಟ್ರಸ್ಟ್ (ರಿ) ಹೊಸದುರ್ಗ ಶ್ರೀ ಕಂಚಿ ಕಾಮಕೋಟಿ ಮೆಡಿಕಲ್ ಟ್ರಸ್ಟ್ ಇವರುಗಳ ಸಂಯುಕ್ತಾಶ್ರಯದಲ್ಲಿ ಸೆ.28 ರಂದು ಶನಿವಾರ ಬೆಳಿಗ್ಗೆ 9 ಗಂಟೆಯಿಂದ ಪಟ್ಟಣದ ಹುಳಿಯಾರು ರಸ್ತೆಯಲ್ಲಿರುವ ಶ್ರೀ ಶಿರಡಿ ಸಾಯಿಬಾಬಾ ಮಂದಿರದ ಆವರಣದಲ್ಲಿ ಉಚಿತ ನೇತ್ರ ತಪಾಸಣಾ ಶಿಬಿರವನ್ನ ಆಯೋಜಿಸಲಾಗಿದೆ ಎಂದು ಶ್ರೀ ಶಿರಡಿ ಸಾಯಿಬಾಬಾ ಟ್ರಸ್ಟ್ (ರಿ) ಅಧ್ಯಕ್ಷ ಹಂಜಿಶಿವಸ್ವಾಮಿ ತಿಳಿಸಿದ್ದಾರೆ.

### ಹೊಸದುರ್ಗದಲ್ಲಿ ಜಾನಪದ ಸಂಭ್ರಮ ಸೆ.29 ರಂದು

» **ಹೊಸದುರ್ಗ**

ಅನಿಕೇತನ ಬಳಗದಿಂದ ಪಟ್ಟಣದ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಹೆಚ್.ಬಿಲ್ಲಪ್ಪ ಅವರ ನಿವಾಸದ ಶ್ರೀ ರಾಮಕೃಷ್ಣ ಸದನದಲ್ಲಿ ಸೆ.29 ರಂದು ಭಾನುವಾರ ಬೆಳಿಗ್ಗೆ 10.30 ಕ್ಕೆ ಸ್ಥಳಿಯ ಕಲಾವಿದರಿಂದ ಜಾನಪದ ಸಂಬ್ರಮ ಕಾರ್ಯಕ್ರಮವನ್ನ ಆಯೋಜಿಸಲಾಗಿದೆ ಎಂದು ಅನಿಕೇತನ ಬಳಗದ ಮುಖ್ಯಸ್ಥ ಪಿ.ಎಲ್.ಲೋಕೇಶ್ವರ್ ತಿಳಿಸಿದ್ದಾರೆ

# ಇತಿಹಾಸ ನಮ್ಮ ಸಂಸ್ಕೃತಿಯ ಪ್ರತಿಬಿಂಬ

» **ಚಿತ್ರದುರ್ಗ**



ಪ್ರಸ್ತತ ಸಮಾಜ ಕಾಣುತ್ತಿರುವ ಅನೇಕ ಸಮಸ್ಯೆಗಳಿಗೆ ಚರಿತ್ರೆಯಲ್ಲಿ ಹಿರಿಯರು ಪರಿಹಾರವನ್ನು ಸೂಚಿಸಿದ್ದಾರೆ. ಅದನ್ನು ನೋಡುವ ವ್ಯವಧಾನ ನಮ್ಮಲ್ಲಿ ಇಲ್ಲವಾಗಿದೆ. ಇದನ್ನು ನೋಡಿ ಕಿಂಚಿತ್ತಾದರೂ ಅನುಸರಿಸುವ ತಾಳ್ಮೆ ಸಹನೆ ನಮ್ಮಲ್ಲಿ ಇಲ್ಲವಾಗಿದೆ ಎಂದು ಹಂಪಿಯ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ.ಪರಮಶಿವಮೂರ್ತಿ ತಿಳಿಸಿದ್ದಾರೆ.

ಸಂಸ್ಕಾರ ಭಾರತಿ ಕರ್ನಾಟಕ ಚಿತ್ರದುರ್ಗ ಜಿಲ್ಲಾ ಸಮಿತಿ ಮತ್ತು ಶಿಕ್ಷಕರ ಸರ್ಕಾರಿ ಶಿಕ್ಷಣ ಮಹಾ ವಿದ್ಯಾಲಯ ಚಿತ್ರದುರ್ಗ ಇವರ ಸಂಯುಕ್ತಾಶ್ರಯದಲ್ಲಿ ನಗರದ ಶಿಕ್ಷಕರ ಸರ್ಕಾರಿ ಶಿಕ್ಷಣ ಮಹಾ ವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಕರ್ನಾಟಕ ಮೊತ್ತ ಮೊದಲ ಸಾಮ್ರಾಜ್ಯ ಸ್ಥಾಪಕ ಮಯೂರವರ್ಮ ಮತ್ತು ಚಿತ್ರದುರ್ಗ ಇದರ ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಅವರು. ನಮ್ಮ ಇಂದಿನ ಜಾಗತಿಕ ವಿದ್ಯಾಮಾನದಲ್ಲಿ ಸ್ಥಳೀಯರ ಆತ್ಮಾ ವಿಶ್ವಾಸ ಕುಸಿಯುತ್ತಿದೆ. ಇದಕ್ಕೆ ಅನೇಕ ಸಾಮಾಜಿಕ, ಅರ್ಥಿಕ, ಧಾರ್ಮಿಕ ಕಾರಣಗಳು ಸಹಾಯ ಮಾಡುತ್ತಿವೆ. ಈ ರೀತಿ ಸಮಯದಲ್ಲಿ ಸ್ಥಳಿಯವಾದ ಇಂತಹ ಇತಿಹಾಸವನ್ನು ಆಳವಾಗಿ ಅಧ್ಯಯನ ಮಾಡುವುದರ ಮೂಲಕ ಆತ್ಮಾಭಿಮಾನದ ಅಂಶಗಳನ್ನು ಮತ್ತೇ ಅದನ್ನು ಹುಡುಕಿ ನಮ್ಮ ಮುಂದಿನ ಭವಿಷ್ಯದ ಘಟನೆಗಳಿಗೆ ಅದನ್ನು ಬೆಸೆಯುವ ಮೂಲಕ ನಮ್ಮ ಆತ್ಮಾ ವಿಶ್ವಾಸವನ್ನು ಹೆಚ್ಚಿಸಿಕೊಳ್ಳುವ ಕೆಲಸ ಹಿಂದಿಗಿಂತಲೂ ಇಂದು ಮತ್ತೇ ಮುಂದೆ ಜರೂರಾಗಿ ಆಗಬೇಕಾದ ಕೆಲಸವಾಗಿದೆ ಎಂದರು.

ಇತಿಹಾಸ ಎಂದರೆ ಈಗ ನಡೆಯಿತು ಹಿಂದೆ ನಡೆಯಿತು ಎಂದು ಅಲ್ಲ, ಇತಿಹಾಸ ನಮ್ಮ ಸಂಸ್ಕೃತಿಯ ಪ್ರತಿಬಿಂಬ ಇದರಿಂದ ಅನೇಕ ಕಾರಣಗಳಿಂದ ನಮ್ಮ ಪೂರ್ವ ಕಾಲದಿಂದ ವಸಹಾತುಶಾಹಿ, ವಿದ್ವಾಂಸರು, ಕಾಲದಿಂದ ನಮ್ಮ ಚರಿತ್ರೆಯ ರಚನೆ ನಡೆದುಕೊಂಡು ಬಂದಿದೆ. ಭಾರತದಲ್ಲಿ ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ಕರ್ನಾಟಕದಲ್ಲಿ ಚರಿತ್ರೆಯ ಆಕರಗಳು, ಚರಿತೆಯ ರಚನೆ, ಚರಿತ್ರೆಯ ಪುನಾರಚನೆ, ತುಂಬಾ ಮುಂಚೂಣಿಯಲ್ಲಿ ಇವೆ. ನಿಜವಾಗಿ ನೆಲವನ್ನು ಪ್ರೀತಿಸುವವರು ಸಂಸ್ಕೃತಿಯನ್ನು ಇಷ್ಟಪಡುವವರಿಗೆ ನಮ್ಮ ಈಗಿನ ಇತಿಹಾಸ ರಚನೆಯ ದೊಡ್ಡ ಚರಿತ್ರೆಯನ್ನು ನೋಡಿದಾಗ ನಿರಾಸೆ ಮತ್ತು ಬೇಸರ ಉಂಟು ಮಾಡುತ್ತದೆ. ಈವರೆಗಿನ ಚರಿತ್ರೆ ಇತಿಹಾಸಕಾರರ ಸ್ವಹಿತಾಸಕ್ತಿಯ ಅನುಗುಣವಾಗಿ ಅಥವಾ ಅವರ ಮೇಲೆ ಬಿದ್ದ ಪ್ರಭಾವದಿಂದ ರಚನೆಯಾಗಿರುವುದನ್ನು ಕಾಣಬಹುದಾಗಿದೆ ಎಂದು ತಿಳಿಸಿದರು.

ಸ್ಥಳೀಯ ಚರಿತ್ರೆಗೆ ಸರಿಯಾದ ನ್ಯಾಯ ಇದುವರೆವಿಗೂ ದೊರಕಿಲ್ಲ, ಈ ಕಾರಣದಿಂದ ಸ್ಥಳಿಯ ಚರಿತೆಯ ಬಗ್ಗೆ ಹೆಚ್ಚು ಹೆಚ್ಚು ಅಧ್ಯಯನಗಳು ಇನ್ನು ಮುಂದಿನ ದಿನದಲ್ಲಿ ನಡೆಯಬೇಕಿದೆ. ಭಾರತ ವೈವಿಧ್ಯಮಯ ಸಂಸ್ಕೃತಿಯನ್ನು ಹೊಂದಿದ ದೇಶವಾಗಿದೆ. ವೈವಿಧ್ಯತೆಯಲ್ಲಿ ಏಕತೆಯನ್ನು ಕಾಣುತ್ತೇವೆ. ವೈವಿದ್ಯತೆಯಲ್ಲಿ ಸ್ಥಳಿಯ ಚರಿತೆಯನ್ನು ಆಧಾರವಿಲ್ಲ, ಕಟ್ಟುಕಥೆ, ಬೇರೆ ಬೇರೆ ಕಾರಣಗಳಿಂದ ನಿರ್ಲಕ್ಷ ಮಾಡಲಾಗಿದೆ. ವೈವಿದ್ಯತೆಯಲ್ಲಿ ಏಕತೆಯನ್ನು ಕಾಣಬೇಕಾದರೆ ಸ್ಥಳಿಯ ಚರಿತ್ರೆಯ ಮೂಲಕ ರಾಷ್ಟ್ರೀಯ ಚರಿತ್ರೆಯನ್ನು ಕಟ್ಟುಕೊಳ್ಳಬೇಕಿದೆ. ಇದನ್ನು ಮುಖ್ಯವಾಗಿ ಗಮನಿಸಬೇಕಿದೆ. ಒಂದು ಸಂಸ್ಥಾನದ ಇತಿಹಾಸ ಎಂದರೆ ರಾಜ-ರಾಣಿಯವರ ಇತಿಹಾಸ ಮಾತ್ರವಲ್ಲ, ಅದು ಸಂಸ್ಥಾನದ ಕೈಕೆಳಗೆ ಇದ್ದ ಜನ ಸಾಮಾನ್ಯರಿಂದ ಮೊದಲುಗೊಂಡು ಪ್ರತಿಯೊಬ್ಬ ಅಧಿಕಾರಿಯ ಇತಿಹಾಸವಾಗಿದೆ.

ಒಂದು ರಾಜ್ಯದ ಉನ್ನತಿಗೆ ಪ್ರದೇಶದ ಬೆಳವಣಿಗೆಗೆ ರಾಜರಿಗಿಂತ ಅದರ ಹೆಚ್ಚಾಗಿ ಶ್ರಮಿಸಿದವರು ಅವರ ಕೈಗೆಳಗಿನ ಮಂಡಲಿಕರು, ಮಂತ್ರಿಗಳು ಮತ್ತು ಅಧಿಕಾರಿಗಳು, ಚರಿತ್ರೆಯಲ್ಲಿ ಇಂತಹ ಎಷ್ಟೋ ಮಹಾನೀಯರ ವಿಳಾಸಗಳು ಇಲ್ಲವಾಗಿದೆ. ಅಂತಹ ಚರಿತ್ರೆಯನ್ನು ನಾವು ಹೆಚ್ಚಾಗಿ ನಂಬಿಕೊಂಡು ಬಂದಿದ್ದೇವೆ. ನಮ್ಮ ವಿದ್ಯಾರ್ಥಿಗಳಿಗೆ ಇಂತಹ ಚರಿತ್ರೆಯನ್ನೇ ಕಲಿಸುತ್ತಿದ್ದೇವೆ ಆದರೆ ಚರಿತ್ರೆ ಎಂದರೆ ಜನ ಸಾಮಾನ್ಯರು ಸಾಗಿ ಬಂದ ದಾರಿಯನ್ನು ಹೊರಳಿ ನೋಡುವುದೇ ಚರಿತ್ರೆ ಅಷ್ಟೇ ಅಲ್ಲ ಹೊರಳಿ ನೋಡುವ ಮೂಲಕ ಮುಂದಿನ ಭವಿಷ್ಯವನ್ನು ಕಟ್ಟುವಂತ ಕೆಲಸವನ್ನು ಮಾಡಲು ಚರಿತ್ರೆಯ ಅಂಶಗಳು ನೆರವಿಗೆ ಬರಬೇಕಿದೆ. ಪ್ರಸ್ತುತಾ ಸಮಾಜ ಕಾಣುತ್ತಿರುವ ಅನೇಕ ಸಮಸ್ಯೆಗಳಿಗೆ ಚರಿತ್ರೆಯಲ್ಲಿ ಹಿರಿಯರು ಪರಿಹಾರವನ್ನು ಸೂಚಿಸಿದ್ದಾರೆ. ಅದನ್ನು ನೋಡುವ ವ್ಯವಧಾನ ನಮ್ಮಲ್ಲಿ ಇಲ್ಲವಾಗಿದೆ. ಇದನ್ನು ನೋಡಿ ಕಿಂಚಿತ್ತಾದರೂ ಅನುಸರಿಸುವ ತಾಳ್ಮೆ ಸಹನೆ ನಮ್ಮಲ್ಲಿ ಇಲ್ಲವಾಗಿದೆ ಎಂದರು. ಇಂದಿನ ದಿನಮಾನದಲ್ಲಿ ತಾಳ್ಮೆಸಹನೆ ಎನ್ನುವುದು ಕೆಡುತ್ತಿದೆ. ಇಂದಿನ ಯುವ ಪಡೆ ಯಾವುದನ್ನು ಆದರ್ಶವಾಗಿಟ್ಟುಕೊಂಡು ತಮ್ಮ ಮುಂದಿನ ಜೀವನವನ್ನು ಕಟ್ಟುಕೊಳ್ಳಬೇಕೆಂಬುದು ನೋಡಿದಾಗ ತುಂಬಾ ನಿರಾಸೆಯಾಗುತ್ತಿದೆ. ಆತ್ಮ ಸ್ಥೈರ್ಯ ಕುಸಿಯುತ್ತಿದೆ. ನಮ್ಮಲ್ಲಿ ನಾನೇಕೆ ಹುಟ್ಟಿದನೊ, ನಾನೇಕೆ ಬಡವನಾದೆ, ನಾನೇಕೆ ಕಲಿಯಬೇಕು, ಎಂಬ ಅಂಶಗಳೇ ನಮ್ಮನ್ನು ಕಾಡುತ್ತಿವೆ. ನನ್ನ ಜನ್ಮತಾಳಿದ್ದೇನೆ ನಾನು ಭೂಮಿಗೆ ಏನಾದರೂ ಕಾಣಿಕೆಯನ್ನು ನೀಡಿ ಜನ್ಮವನ್ನು ಸಾರ್ಥಕ ಪಡಿಸಿಕೊಳ್ಳಬೇಕೆಂಬ ಭಾವನೆ ಯಾರಲ್ಲೂ ಸಹಾ ಇಲ್ಲವಾಗಿದೆ. ಇದರ ಬದಲಾಗಿ ನಾವು ಏನು ಪಡೆಯಬೇಕೆಂದು ಕೇಳುತ್ತಿದೆ ಸಮಾಜಕ್ಕೆ ನಾವು ಏನು ಕೊಡಬಹುದೆ ಎಂಬುದನ್ನು ಮರೆಯಲಾಗುತ್ತಿದೆ ಎಂದು ಪರಮಶಿವಮೂತಿ ಆತಂಕವನ್ನು ವ್ಯಕ್ತಪಡಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಕಾರ ಭಾರತಿಯ ಜಿಲ್ಲಾ ಅಧ್ಯಕ್ಷರಾದ ಶ್ರೀಮತಿ ಸುಜಾತ ಲಿಂಗಾರೆಡ್ಡಿ ವಹಿಸಿದ್ದರು. ಸಮಾರಂಭದಲ್ಲಿ ಶಿಕ್ಷಕರ ಸರ್ಕಾರಿ ಶಿಕ್ಷಣ ಮಹಾ ವಿದ್ಯಾಲಯದ ಪದ ನಿಮಿತ್ತ ಸಹ ನಿರ್ದೇಶಕರಾದ ಶ್ರೀಮತಿ ಲೀಲಾವತಿ, ಇತಿಹಾಸ ತಜ್ಞರಾದ ಡಾ.ರಾಜಶೇಖರಪ್ಪ, ಹಿರಿಯೂರಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ತಿಪ್ಪೇಸ್ವಾಮಿ, ಡಾ.ಯಶೋಧಾ ರಾಜಶೇಖರಪ್ಪ, ಸಂಸ್ಕಾರ ಭಾರತೀಯ ಮಾಜಿ ಪ್ರಧಾನ ಕಾರ್ಯದರ್ಶಿಗಳಾದ ಡಾ.ರಾಜೀವ ಲೋಚನ, ಕಾರ್ಯದರ್ಶಿಗಳಾದ ಮಾರುತಿ ಮೋಹನ್, ಉಮೇಶ್ ತುಪ್ಪದ್ ಸಂಘಟನಾ ಕಾರ್ಯದರ್ಶಿ ರಾಮಚಂದ್ರ, ಪ್ರಧಾನ ಕಾರ್ಯದರ್ಶಿ ಹೇಮಂತ ರಾವ್, ಭಾಗವಹಿಸಿದ್ದರು.

ಗುರುರಾಜ್ ಪ್ರಾರ್ಥಿಸಿದರೆ, ನಾಗರಾಜ್ ಸ್ವಾಗತಿಸಿದರು, ಚಂದ್ರಿಕಾ ಸುರೇಶ್ ಕಾರ್ಯಕ್ರಮ ನಿರೂಪಿಸಿ ಪ್ರಸ್ತಾವಿಕವಾಗಿ ಮಾತನಾಡಿದರು.

## ಮಕ್ಕಳ ಕಾಣೆ ಪತ್ತೆಗೆ ಗಡುವು ನೀಡಿ ವರದಿ ಪಡೆದುಕೊಳ್ಳಿ: ನ್ಯಾ.ಎಂ.ವಿಜಯ್ ಸೂಚನೆ

» **ಚಿತ್ರದುರ್ಗ**



ಕಾಣೆ ಪ್ರಕರಣಗಳಲ್ಲಿ ನಿಗದಿತ ಅವಧಿಯೊಳಗೆ ಮಕ್ಕಳನ್ನು ಪತ್ತೆ ಹಚ್ಚುವಂತೆ ಪೊಲೀಸ್ ಅಧಿಕಾರಿಗಳಿಗೆ ಗಡುವು ನೀಡಿ ಪ್ರಕರಣದ ಸ್ಥಿತಿಗತಿ ಕುರಿತು ವರದಿ ಪಡೆದುಕೊಳ್ಳುವಂತೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶ ಎಂ.ವಿಜಯ್ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗೆ ನಿರ್ದೇಶನ ನೀಡಿದರು.

ನಗರದ ಬಾಲ ಭವನ ಕಚೇರಿಯಲ್ಲಿ ಶುಕ್ರವಾರ ಕಾಣೆಯಾದ ಮಕ್ಕಳ ಪತ್ತೆ ಕುರಿತು ಪೋಷಕರು ಹಾಗೂ ತನಿಖಾ ಪೊಲೀಸ್ ಅಧಿಕಾರಿಗಳ ಸಭೆ ಜರುಗಿಸಿ ಅವರು ಮಾತನಾಡಿದರು.

ಕಾಣೆಯಾದ ಮಕ್ಕಳ ಪತ್ತೆ ಕಾರ್ಯವನ್ನು ಚುರುಕುಗೊಳಿಸಬೇಕು. ಪತ್ತೆ ಕಾರ್ಯದ ತನಿಖೆ ಪ್ರಗತಿ ಬಗ್ಗೆ ಪೋಷಕರಿಗೆ ಮಾಹಿತಿ ನೀಡಬೇಕು. ಮಕ್ಕಳು ಪತ್ತೆಯಾದ ಪ್ರಕರಣಗಳಲ್ಲಿ ಮಾಹಿತಿ ಪಡೆದು ಪ್ರಕರಣಗಳನ್ನು ವಿಲೇವಾರಿ ಮಾಡುವಂತೆ ಸೂಚಿಸಿದರು.

2021 ರಿಂದ 2024 ವರೆಗೆ ಜಿಲ್ಲೆಯಲ್ಲಿ 365 ಮಕ್ಕಳ ಕಾಣೆ ಪ್ರಕರಣಗಳು ಐ.ಪಿ.ಸಿ ಕಲಂ 363ರ ಅಡಿಯಲ್ಲಿ ದಾಖಲಾಗಿವೆ. ಇವುಗಳ ಪೈಕಿ 359 ಪಕ್ರರಣಗಳಲ್ಲಿ ಮಕ್ಕಳನ್ನು ಪತ್ತೆ ಹಚ್ಚಲಾಗಿದೆ. ಇದೇ ಅವಧಿಯಲ್ಲಿ ಪೋಷಕರೊಂದಿಗೆ ಕಾಣೆಯದ 131 ಮಕ್ಕಳ ಪ್ರಕರಣಗಳು ದಾಖಲಾಗಿವೆ. ಇದರಲ್ಲಿ 129 ರ ಪಕ್ರಣಗಳನ್ನು ಪತ್ತೆ ಹಚ್ಚಲಾಗಿದೆ. ಆಗಸ್ಟ್ ತಿಂಗಳಿನಲ್ಲಿ ರಾಂಪುರ ಹಾಗೂ ಚಿಕ್ಕಜಾಜೂರು ಪೊಲೀಸ್ ಠಾಣೆಗಳಲ್ಲಿ ದಾಖಲಾದ ಮಕ್ಕಳ ಕಾಣೆ ಪ್ರಕರಣಗಳಲ್ಲಿ ಪೊಲೀಸರು ಮಕ್ಕಳನ್ನು ಪತ್ತೆ ಹಚ್ಚಿ ಪೊಷಕರಿಗೆ ಒಪ್ಪಿಸಿಲಾಗಿದೆ ಎಂದು ಪೊಲೀಸರು ನ್ಯಾಯಾಧೀಶರಿಗೆ ವರದಿ ನೀಡಿದರು.

ಸಭೆಯಲ್ಲಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಜಿ.ಸವಿತಾ, ಮಕ್ಕಳ ಕಲ್ಯಾಣ ಸಮಿತಿ ಸದಸ್ಯರಾದ ಬಸವರಾಜ್, ಗುರುಮೂರ್ತಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

### ಗೊಡಬನಹಾಳ್‌ನಲ್ಲಿ ಪೋಷಣ್ ಮಾಸಾಚರಣೆ ಗರ್ಭಿಣಿಯರಿಗೆ ಸೀಮಂತ ಕಾರ್ಯಕ್ರಮ



» **ಚಿತ್ರದುರ್ಗ**

ರಾಷ್ಟ್ರೀಯ ಪೋಷಣೆ ಮಾಸಚಾರಣೆ ಅಂಗವಾಗಿ ಚಿತ್ರದುರ್ಗ ತಾಲ್ಲೂಕು ಗೊಡಬೀನಾಹಾಳ್ ಅಂಗನವಾಡಿ ಕೇಂದ್ರದಲ್ಲಿ ಗುರುವಾರ ಶಿಶು ಅಭಿವೃದ್ಧಿ ಯೋಜನೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಕಾರ್ಯಕ್ರಮ ಆಯೋಜಿಸಿ, ಗ್ರಾಮದ ಗರ್ಭಿಣಿಯರಿಗೆ ಸೀಮಂತ ಕಾರ್ಯ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಶಿಶು ಮೇಲ್ವಿಚಾರಕಿ ಇಂದಿರಾ. ಆರ್, ಬಾಲ್ಯ ವಿವಾಹ ನಿಷೇದ ಕಾನೂನಿನ ಬಗ್ಗೆ ತಿಳಿಸಿ 18 ವರ್ಷ ತುಂಬುವವರೆಗೂ ಯಾರು ಬಾಲ್ಯ ವಿವಾಹ ಮಾಡುವಂತಿಲ್ಲ. ಇದನ್ನು ಮೀರಿ ಯಾರಾದರು ಬಾಲ್ಯ ವಿವಾಹ ಮಾಡಿದಲ್ಲಿ ಪೊಲೀಸರಿಗೆ ದೂರು ನೀಡಿ ಎಫ್.ಐ.ಆರ್ ದಾಖಲಿಸಲಾಗುವುದು. ಬಾಲ್ಯ ವಿವಾಹವನ್ನು ನ್ಯಾಯಾಲಯ ಗಂಭೀರವಾಗಿ ಪರಿಗಣಿಸಿ ಕಠಿಣ ಶಿಕ್ಷೆ ವಿಧಿಸುವುದು. ಬಾಲ್ಯ ವಿವಾಹ ಕಂಡು ಬಂದಲ್ಲಿ 1098 ಕ್ಕೆ ಕರೆ ಮಾಡಿ ದೂರು ನೀಡಬೇಕು ಎಂದು ತಿಳಿಸಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಯೋಜನೆಗಳು ಮತ್ತು ಪೌಷ್ಟಿಕ ಆಹಾರದ ಮಹತ್ವದ ಬಗ್ಗೆ ಸಾರ್ವಜನಿಕರಿಗೆ ಗರ್ಭಿಣಿ ಬಾಣಂತಿಯರಿಗೆ ಅರಿವು ಮೂಡಿಸಿದರು.

ಆರೋಗ್ಯ ಇಲಾಖೆ ವತಿಯಿಂದ ಸ್ವಚ್ಚತೆ, ರಕ್ತ ಹೀನತೆ ಮತ್ತು ಸ್ಥನ್ಯ ಪಾನ ಸಪ್ತಾಹದ ಕುರಿತು ಜನರಲ್ಲಿ ಜಾಗೃತಿ ಮೂಡಿಸಲಾಯಿತು. ಆರೋಗ್ಯ ಇಲಾಖೆಯ ಸುಧಾಕರ್ ಮಾತಾಡಿ ಅಂಗನವಾಡಿ ಕಾರ್ಯ ಕರ್ತರು ಅಪೌಷ್ಠಿಕ ಮಕ್ಕಳನ್ನು ಸರಿಯಾಗಿ ಗುರುತಿಸಿಬೇಕು. ಅವರು ಸಾಮಾನ್ಯ ಆರೋಗ್ಯ ಹೊಂದುವವರೆಗೂ ಪ್ರತಿ ಅಪೌಷ್ಟಿಕ ಮನೆಗಳಿಗೆ ತೆರಳಿ ಮಕ್ಕಳ ಆರೋಗ್ಯ ಮೇಲ್ವಿಚಾರಣೆ ನಡೆಸಬೇಕು ಎಂದರು.

### ಜನರಲ್ ಕಾರ್ಯಪ್ಪ ಸ್ಮಾರಕ ಶಾಲೆಯ ವಿದ್ಯಾರ್ಥಿಗಳು ವಿಭಾಗ ಮಟ್ಟಕ್ಕೆ

**ಹೊಸದುರ್ಗ:** ಪಟ್ಟಣದ ಜನರಲ್ ಕಾರ್ಯಪ್ಪ ಸ್ಮಾರಕ ಶಾಲೆಗೆ 2024- 25 ನೇ ಸಾಲಿನ ಜಿಲ್ಲಾ ಮಟ್ಟದ ಪ್ರೌಢಶಾಲಾ ವಿಭಾಗದ ಬಾಲಕರ ಶಟಲ್ ಬ್ಯಾಡ್ಮಿಂಟನ್ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸಿ ಪ್ರಥಮ ಸ್ಥಾನವನ್ನು ಪಡೆದು ವಿಭಾಗ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಈ ಸಾಧನೆ ಮಾಡಿ ಶಾಲೆಯ ಕೀರ್ತಿ ಹೆಚ್ಚಿಸಿದ ವಿದ್ಯಾರ್ಥಿಗಳಿಗೆ ಸಂಸ್ಥೆಯ ಅಧ್ಯಕ್ಷ ಹಂಜಿ ಶಿವ ಸ್ವಾಮಿ ಹಾಗೂ ಆಡಳಿತಾಧಿಕಾರಿ ಕಿರಣ್‌ಕುಮಾರ್, ಸಂಯೋಜಕರಾದ ಸುಜಾತ ಮುಖ್ಯ ಶಿಕ್ಷಕ ಪುಂಡರೀಕ್, ದೈಹಿಕ ಶಿಕ್ಷಕ ಗೋಪಿನಾಥ್ ಮತ್ತು ಶಾಲಾ ಸಿಬ್ಬಂದಿ ವರ್ಗದವರು ಅಭಿನಂದನೆ ಸಲ್ಲಿಸಿದ್ದಾರೆ.

## ಪ್ರಮುಖ ಸುದ್ದಿ

# ವಿಶ್ವಕರ್ಮ ಸಮುದಾಯವರಿಗೆ ಕಲೆ ರಕ್ತಗತ: ಪ್ರಸನ್ನಕುಮಾರ್

» **ಚಳ್ಳಕೆರೆ**



ಕರ್ನಾಟಕದ ವಾಸ್ತುಶಿಲ್ಪ, ಶಿಲ್ಪಕಲೆಗೆ ಜೀವಂತಿಗೆ ತುಂಬಿ, ಬೆಲೂರು, ಹಳೇಬೀಡಿನಂತಹ ಅದ್ಭುತ ನಾಡುಕಟ್ಟಿದ ಕೀರ್ತಿ ವಿಶ್ವಕರ್ಮ ಸಮಾಜದ್ದು ಎಂದು ಪದ್ಮಶ್ರೀ ಪ್ರಶಸ್ತಿ ವಿಜೇತ ಡಾ.ಕೆ.ಎಸ್. ರಾಜಣ್ಣ ತಿಳಿಸಿದರು.

ಅವರು, ನಗರದ ವಿಶ್ವಕರ್ಮ ಕಲ್ಯಾಣ ಮಂಟಪದಲ್ಲಿ ಸಮುದಾಯದ ವಿವಿಧ ಸಂಘಟನೆಗಳು ಹಮ್ಮಿಕೊಂಡಿದ್ದ ವಿಶ್ವಕರ್ಮ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದರು.

ವಿಶ್ವಕರ್ಮ ಋಷಿಯ 5 ಮುಖಗಳು ಪಂಚಭೂತಗಳನ್ನು ಸೂಚಿಸುತ್ತದೆ. ಆ ಮುಖದಿಂದ ಸೃಷ್ಟಿಯಾದವರು ಪಂಚ ಋಷಿಗಳು. ಆ ಪರಂಪರೆಯಿಂದ ರಕ್ತಗತವಾಗಿ ಬಂದವರು ವಿಶ್ವಕರ್ಮ ಸಮುದಾಯದವರು. ಸಮುದಾಯದ ಪರಂಪರೆಯ ಬಗ್ಗೆ ತಿಳಿದಾಗ ಮಾತ್ರ ಆಚರಣೆಗೆ ಮಹತ್ವ ದೊರೆಯುವುದು. ಪ್ರತಿಯೊಬ್ಬರೂ ವಿಶ್ವಕರ್ಮರ ಅರಿಯಲು ಹೆಚ್ಚು ಅಧ್ಯಯನ ಶೀಲರಾಗಿ. ಮಕ್ಕಳಲ್ಲೂ ಸಹ ಸಾಧನೆ ಮಾಡಬೇಕೆಂಬ ಮನೋಭಾವನೆಯನ್ನು ಉಂಟು ಮಾಡಿ, ಹೆಚ್ಚು ಆತ್ಮವಿಶ್ವಾಸದಿಂದ ಬದುಕು ಕಟ್ಟಿಕೊಳ್ಳಿ ಎಂದು ಕರೆ ನೀಡಿದರು.

ಕುಶಲಕರ್ಮಿ ಪರಿಷತ್ ರಾಜ್ಯಾಧ್ಯಕ್ಷ ಆರ್.ಪ್ರಸನ್ನಕುಮಾರ್ ಮಾತನಾಡಿ, ವಿಶ್ವಕರ್ಮ ಸಮುದಾಯವರಿಗೆ ಕಲೆ ರಕ್ತಗತ ಬಂದಿದೆ. ನಮ್ಮ ಸಮುದಾಯದ ಪರಂಪರೆ, ಮಠ, ಮಂದಿರ, ಗುಡಿ ಗೋಪುರಗಳ ನಿರ್ಮಾಣದಲ್ಲಿ ವಿಶ್ವಕರ್ಮರ ಕೊಡುಗೆ ಅಪಾರ. ಆಧುನಿಕತೆ ಬೆಳೆದಂತೆ ಶಿಲ್ಪಿಗಳ ಸಂಖ್ಯೆ ಕ್ಷೀಣಿಸುತ್ತಿದೆ, ಯುವಪೀಳಿಗೆ ನಮ್ಮ ಮೂಲಕಸುಬನ್ನು ತೊರೆದು ಅನ್ಯ ಉದ್ಯೋಗಗಳತ್ತ ಮುಖ ಮಾಡುತ್ತಿರುವುದು ವಿಷಾದ ಸಂಗತಿ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಮಾಜದ ಅಧ್ಯಕ್ಷ ಚಂದ್ರಶೇಖರಚಾರಿ, ಪ್ರತಿವರ್ಷ ವಿಶ್ವಕರ್ಮ ಜಯಂತಿ ಕಾರ್ಯಕ್ರಮವನ್ನು ನಮ್ಮ ಸಮುದಾಯ ವಿಶೇಷ ಭಕ್ತಿ, ಶ್ರದ್ದೆಯಿಂದ ಆಚರಿಸುತ್ತಾ ಬಂದಿದೆ. ವಿಶ್ವಕರ್ಮ ಸಮಾಜದ ಅಂಗ ಸಂಸ್ಥೆಗಳಾದ ಮಹಿಳಾ ಸಂಘ, ಯುವಕ ಸಂಘ, ಚಿನ್ನಬೆಳ್ಳಿ ವರ್ತಕರ ಸಂಘ ಸೇರಿದಂತೆ ಎಲ್ಲರೂ ಈ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಲು ಸಹಕಾರ ನೀಡಿದ್ದಾರೆ ಎಲ್ಲರಿಗೂ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು.

ನಗರಸಭಾ ಅಧ್ಯಕ್ಷೆ ಜೈತುಂಬಿ, ಉಪಾಧ್ಯಕ್ಷೆ ಓ.ಸುಜಾತ, ಸದಸ್ಯರಾದ ಪಾಲಮ್ಮ, ಮಂಜುಳಾ, ಮಾಜಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಟಿ.ತಿಪ್ಪೇಸ್ವಾಮಿ, ಕೆಪಿಸಿಸಿ ಕುಶಲಕರ್ಮಿ ವಿಭಾಗದ ರಾಜ್ಯಾಧ್ಯಕ್ಷ ಆರ್.ಪ್ರಸನ್ನಕುಮಾರ್, ಮಾಜಿ ಅಧ್ಯಕ್ಷ ಡಿ.ವೆಂಕಟೇಶ್‌ಚಾರ್, ಉಪಾಧ್ಯಕ್ಷ ವೈ.ನಾಗರಾಜು, ಯುವ ಘಟಕದ ಅಧ್ಯಕ್ಷ ಸೀತಾರಾಮಚಾರ್, ಸಹ ಕಾರ್ಯದರ್ಶಿ ಭರತ್‌ಕುಮಾರ್, ಖಜಾಂಚಿ ಜಿ.ಪಿ.ಪದ್ಮನಾಭಚಾರ್, ಚಿನ್ನಬೆಳ್ಳಿ ವರ್ತಕರ ಸಂಘದ ಅಧ್ಯಕ್ಷ ಬಿಎನ್‌ಜಿ ವೆಂಕಟೇಶ್, ಮಹಿಳಾ ಘಟಕದ ಅಧ್ಯಕ್ಷೆ ಉಮಾದೇವಿ, ಮಹಿಳಾ ಘಟಕದ ಮಾಜಿ ಅಧ್ಯಕ್ಷ ಕಮಲಮ್ಮ, ಶ್ರೀಧರಚಾರ್, ಸರಸ್ವತಿ, ಎಂ.ಸುಮ, ಸುಮಲತ, ರಾಜೇಶ್ವರಿ, ಸಿ.ಇ.ಪ್ರಸನ್ನಕುಮಾರ್, ಆರ್.ಬ್ರಹ್ಮಚಾರ್, ಶ್ರೀನಿವಾಸ್‌ಚಾರ್, ಡಿ.ಶಿವಕುಮಾರ್, ರಾಜೇಂದ್ರಚಾರ್, ಮೌನೇಶಚಾರ್, ಕಿರಣ್‌ಕುಮಾರ್ ಮುಂತಾದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.




# ಪ್ರೀತಿ ಇಲ್ಲದ ಮೇಲೆ ಹೂವು ಅರಳೀತು ಹೇಗೆ?

ಮೋಡ ಕಟ್ಟೀತು ಹೇಗೆ? ಹನಿಯೊಡೆದು ಕೆಳಗಿಳಿದು ನೆಲಕೆ ಹಸಿರು ಮೂಡೀತು ಹೇಗೆ? ರಾಷ್ಟ್ರಕವಿ ಜಿಎಸ್ಸೆಸ್ ರವರ ಈ ಭಾವಗೀತೆ ಜೀವನ ಪ್ರೀತಿಯ ಸಾವಿರ ಭಾವನೆಗಳ ಹೊರಹೊಮ್ಮಿಸುತ್ತದೆ. ಹೂವಿಗೆ ಪ್ರೀತಿ ಇದೆ ಬಂದು ಮುದ್ದಿಡುವ ದುಂಬಿಯ ಮೇಲೋ? ಸಲಹಿ ಬೆಳೆಸಿದ ಭೂಮಿಯ ಮೇಲೋ? ಮಳೆ ಸುರಿಸಿ ಪೊರೆಯುವ ಗಗನದ ಮೋಡಗಳ ಮೇಲೋ? ಗಂಧ ಪಸರಿಸುವ ಗಾಳಿಯ ಮೇಲೋ? ಕಣ್ಣರಳಿಸಿ ನೋಡುತ ಆನಂದತುಂದಿಲರಾಗುವ ರಸಿಕ ಜನಗಳ ಮೇಲೋ? ಅಂತೂ ಭಿಮ್ಮನೆ ಅರಳುತ್ತದೆ. ಘಮ್ಮನೆ ಮುಲುಗುತ್ತದೆ. ಚಂದಗೆ ಬಳುಕುತ್ತದೆ. ಅಂದಗೆ ನುಲಿಯುತ್ತದೆ. ಮೆಲ್ಲಗೆ ತೊನೆದು ಬಾಗಿ ಏಳುತ್ತದೆ.

ಪ್ರೀತಿ ಧರಣಿಗೂ ಬಾನಿಗು. ಕಾಮನಬಿಲ್ಲಿನ ಸೃಷ್ಟಿಯೇ ಅದಕ್ಕೆ ಸಾಕ್ಷಿ! ಮಳೆ ಬಂದು ನೇಸರನ ಬೆಳಕು ತಾಗಿ ವರ್ಣ ವಿಭಜನೆಯ ಆಟ ಅದೆಂದರೂ; ವಿಜ್ಞಾನದ ಮಾತು ಪೃಥ್ವಿ ಆಕಾಶದ ಪ್ರೀತಿಯ ಕೆಮೆಸ್ಟ್ರಿಗೆ ಅಡ್ಡಿಯಾಗದು. ಆ ಗಗನವೂ ತನ್ನ ಮೋಡಗಳ ಮಳೆ ಸುರಿದು ಒಲವ ಮುತ್ತಿಟ್ಟು ಧರಣಿಯ ಮಣಿಸಿ ತಣಿಸಿ ತಂಪಗಿಡಲು ಹೆಣಗುವುದು. ಹಸಿರಸಿರ ಚಿಗುರಿಸಿ ಕಾಯ್ದು ಭೂರಮೆಯ ಹೂಗರಿಕೆ ಬಳ್ಳಿ ಗಿಡ ಮರಗಳಿಂದ ಅಲಂಕರಿಸುವುದು. ಮೋಡಗಳ ಮೂಲಕ ಒಲವ ಓಲೆ ಕಳಿಸಿದ ಮೇಘಧೂತ ಕಾಳಿದಾಸ ಮೋಡಗಳಿಗು ಒಲವ ಗೋರಂಟಿ ಹಚ್ಚಿದ್ದು ಭಲೇ ಭಲೇ. ಬಾನುವಿನ ಪ್ರೀತಿ ಈ ಇಳೆಯ ಹಸಿರು. ಮೋಡಗಳ ಪ್ರೀತಿ ಹೂಮಳೆಯ ಉಸಿರು!

ಹೊಳೆ ನದಿಗಳ ಕಲರವ ಅವುಗಳ ಸಾಗರ ಸೇರುವ ಓಟ ಸಮುದ್ರರಾಜನೆಡೆಗಿನ ಆಕರ್ಷಣೆಯೇ ಸರಿ. ಯಾವ ನದಿಯಾದರು ಅಂಬುಧಿಯ ಅಪ್ಪದೇ ಮುಕ್ತಿಯಿಲ್ಲ. ಅಬ್ಧಿಯ ಸೇರದ ನದಿ ಇಳೆಯಲ್ಲೇ ಇಂಗಿದರೆ ಅದು ಗುಪ್ತ ಅಂತರ್ಜಲವಾಗಿಯಾದರು ಸರಿ ಧರಣಿಯ ಒಡಲೊಳಗಿಂದ ಹರಿಯದೇ ಇರದು ಒಲವ ರಾಜನೆಡೆಗೆ. ನದಿಗಳ ಬಳುಕೇ ವಿಸ್ಮಯ ಆತ್ಮಾಕರ್ಷಕ. ಅವುಗಳ ಅಂಕುಡೊಂಕು ತಿರುವು, ಬಳುಕುವ ಮೈಮಾಟ, ತುಂಬಿ ತುಳುಕುವ ತೊನೆದಾಟ, ಬಿಡು ಬೀಸಿನ ಮೈಮಾಟ, ಯಾವ ಧರಣಿಯ



ತರುಣಿಯರಿಗು ಇಲ್ಲವೆಂದರೆ ಅತಿಶಯೋಕ್ತಿಯೇನಲ್ಲ! ನದಿಗಳ ಕಂಡೇ ನಾರಿಯರ ಅಂಗಾಂಗ ಅಂದ ಹೆಚ್ಚಿಸುವ ಪ್ರಯತ್ನಗಳು ನಡೆದಿರಬಹುದೇನೋ! ಅಗಾಧ ಸಾಗರನ ಸೀಳಿ ಒಳಗಾಗಿ ಒಳಗೊಳ್ಳಲು ಗೆಲ್ಲಲು ಸಾಮಾನ್ಯರಿಗೆ ಸಾಧ್ಯವೇ? ಕೃಷ್ಣಾ ತುಂಗಾ ಗಂಗಾ ಕಾವೇರಿ ಗೋದಾವರಿ ಕಪಿಲಾ... ಆಹಾ ನಿಮ್ಮಗಳ ಪ್ರೀತಿಯೇ ಧನ್ಯ. ಸಮುದ್ರ ಸೇರುವ ನಿಮ್ಮ ಜೀವನವೇ ಪುಣ್ಯ. ಪ್ರೀತಿಯೊಂದಿರಲು ಇವೆಲ್ಲ ಸಾಧ್ಯ.

ಮರವನಪ್ಪಿ ಬೆಳೆವ ಮಲ್ಲಿಗೆಯೋ ಬಸಳೆಯೋ ಮತ್ತೊಂದು ಬಳ್ಳಿಯೋ ಅದೆಷ್ಟು ಒಲವಿಂದ ಆಲಂಗಿಸಿಹವು. ಬಳ್ಳಿಯ ಬಿಡಿಸಿ ತೆಗೆದರು ಅವುಗಳಪ್ಪುಗೆಯ ಗುರುತು ಗೆರೆಗಳು ಬಲಾಢ್ಯ ಮರದ ತೊಗಟೆಯಲ್ಲಿ ಹಚ್ಚೆ ಹೊಯ್ದಂತೆ ಶಾಶ್ವತ. ಇದು ಮರ ಬಳ್ಳಿಗಳ ಪ್ರೀತಿಯ ಅಮೃತ. ನೆಲದ ಮೇಲರಡಿ ಬೆಳೆವ ಕುಂಬಳವೋ ಕಲ್ಲಂಗಡಿಯೋ ಭೂಮಿಯ ತಂಪು ಹೆಚ್ಚಿಸಿ ಕಂಪು ಹೀರಿ ಪ್ರೀತಿಯ ಹಣ್ಣ ಹಂಚುವವು. ಅಲ್ಪಾಯುಗಳಾದರು ಇವುಗಳ ಇರುವು ಹಬ್ಬಗಳಿಗೆ ಮೆರುಗು. ಧರಣಿಗೇ ಸೊಬಗು. ಮರವನಪ್ಪಿ ಬೆಳೆದ ಬಳ್ಳಿಗಳು ದೀರ್ಘಾಯುಗಳು. ಕಾಲನ ಒಡೆತಕ್ಕೆ ಸಿಕ್ಕಿ ಸುಕ್ಕಿದ ಗೆಲ್ಲು ಗೆಲ್ಲುಗಳನ್ನು ಒಲವಿನಲ್ಲಿ ಬಗ್ಗಿಸಿ ಮುದ್ದಿಡುವ ಬಳ್ಳಿಗಳ ಪ್ರೀತಿಯ ಪರಿಯೇ ಸೋಜಿಗ.

ಹಸುವಿನ ಅಂಬಾ ಎಂಬೊಲವಿನ ಕರೆಗೆ ಕೂಸು ಕರು ಅಂಬೋ ಎಂದು ಜಿಗಿದೋಡುತ ಬರುವ ಪ್ರೀತಿ ವರ್ಣಿಸಲಸದಳ. ಪುಣ್ಯಕೋಟಿಯ ಪ್ರೀತಿ ತನ್ನ ಕಂದಮ್ಮಗಷ್ಟೇ ಮೀಸಲೇನಲ್ಲ ತನ್ನ ಸಾಕಿದವರಿಗೂ ಹಾಲಿಟ್ಟು ಸಾಕುವ ಪರಿಯದು ಸ್ವರ್ಗಸದೃಶ. ಯಾವುದೇ ಮೂಕ ಜೀವಿಯೂ ತನ್ನ ಬಳಗವ ಪೊರೆಯುವ ಪ್ರೀತಿಯ ರೀತಿ ಅದ್ಭುತ. ಕಾಗೆಯೊಂದಗುಳ ಕಂಡರೆ ಕೂಗಿ ಕರೆಯದೆ ತನ್ನ ಕುಲವನೆಲ್ಲವ. ಕೋಳಿಯೊಂದು ಕುಟುಕು ಕಂಡರೆ ಕರೆಯದೆ ತನ್ನ ಬಳಗವನೆಲ್ಲವ... ಎಂಬ ವಚನವಾಣಿ ಪ್ರಾಣಿ ಪಕ್ಷಿಗಳ ಅನ್ಯಾದೃಶ ಪ್ರೀತಿಯ ತೋರುವುದು.

ಏನು ಬಂದಿರೆ ಹದುಳವಿದ್ದಿರೆ ಎಂದಡೆ ನಿಮ್ಮ ಮೈಸಿರಿ ಹಾರಿಹೋಹುದೆ? ಒಡನೆ ನುಡಿದರೆ ಸಿರ ಹೊಟ್ಟೆ ಹೊಡೆವುದೇ? ಕೊಡಲಿಲ್ಲದಿದ್ದೊಡೊಂದು ಗುಣವಿಲ್ಲದಿದ್ದಡೆ ಕಾಗೆ ಕೋಳಿಗಿಂತ ಕರಕಷ್ಟ ನರನ ಬಾಳ್ವೆ! ಎಂಬ ವಚನದ ಸಾಲುಗಳು ಮನುಷ್ಯನ ಜಿಪುಣತನಕ್ಕಿಂತ ಮಾನವ ಪ್ರೀತಿಯ ಕೊರತೆಯನ್ನು ಬೊಟ್ಟು ಮಾಡಿ ತೋರುತ್ತದೆ. ಪ್ರಾಣಿಗಳೆ ಗುಣದಲಿ ಮೇಲು ಮಾನವನದಕ್ಕಿಂತ ಕೀಳು; ಉಪಕಾರವ ಮಾಡಲಾರ ಬದುಕಿದರೆ ಸೈರಿಸಲಾರ... ಎಂಬ ಗೀತೆ ಮನುಷ್ಯನಲ್ಲಿನ ಸಣ್ಣತನಗಳ ದಟ್ಟವಾಗಿ ಹೇಳುತ್ತದೆ. ಪ್ರೀತಿ ಇಲ್ಲದ ಮೇಲೆ ಸಂಬಂಧಗಳ ಸುಧಾರಣೆಯೂ ಆಗದು. ಅನುಬಂಧಗಳ ಅನುರಾಗವು ಅರಳಿ ಹಬ್ಬದು. ಸಹನೆ ಕರುಣೆ ಮಮತೆ ವಿಶ್ವಾಸ ಭಾವೈಕ್ಯತೆ ಉಪಕಾರ ಉಪಚಾರಗಳ ಮೌಲ್ಯಗಳು ಬೆಳೆದು ಉಳಿಯವು.

ದಯೆಯೇ ಧರ್ಮದ ಮೂಲವಯ್ಯ; ತನ್ನಂತೆ ಇತರರ ಬಗೆದೊಡೆ ಸ್ವರ್ಗವೇ ಬಳಿಯಲ್ಲಿದ್ದಂತೆ. ಸಹವರ್ತಿ ಮಾನವರ ಕುರಿತು ಕುಲ ಜಾತಿ ಮತ ಪಂಥಗಳ ರಾಗ ದ್ವೇಷಗಳಿರದೆ ಆರ್ದ್ರ ಅನುಕಂಪದಿಂದ ಕೂಡಿದ ಒಲವಿರದಿದ್ದರೆ ಬದುಕುವ ಒಡನಾಟದ ತಾಳ್ಮೆ ಇರದಿದ್ದರೆ ಸೋಲು ಗೆಲುವು ನೋವು ನಲಿವುಗಳ ಸೈರಿಸಿಕೊಂಡು ಹಂಚಿಕೊಂಡು ಗೆದ್ದುಕೊಂಡು ಹೋಗುವ ಅಭೀಪ್ಸೆ ಇರದಿದ್ದರೆ ಅಂತಹ ಮಾನವರೆದೆ ಸುಡುಗಾಡೆ ಸರಿ! ಒಲವೇ ಜೀವನ ಸಾಕ್ಷಾತ್ಕಾರ. ಇದು ಕೇವಲ ಗಂಡು ಹೆಣ್ಣಿನ ದೈಹಿಕ ಒಲವಾಗಬೇಕಿಲ್ಲ. ಮನುಜ ಮನುಜರು ಕೂಡಿ ಬಾಳುವ ಒಲವಾಗಬೇಕು. ಏನಾದರೂ ಆಗಬಹುದು ಮಾನವತೆಯಿರುವ ಮಾನವರೇ ಆಗದಿರೆ ಪ್ರೀತಿ ಇದ್ದೇನು ಪ್ರಯೋಜನ?

ಪ್ರೀತಿ ಕೇವಲ ಹರೆಯದ ದೇಹದ ಆಸೆಗಳ ತುಮುಲವಲ್ಲ. ಮನಸ್ಸುಗಳ ಪ್ರಬುದ್ಧತೆಯ ಚಿಂತನೆಯದು. ಅನುಮಾನಗಳಿಗೆ ಎಡೆಯಿರದೆ ಅಸಂಬದ್ಧಗಳಿಗೆ ಎಡೆಕೊಡದೆ ಅನುಗಾಲವು ನಂಬಿಕೆಯಿರುವ ಸ್ವರ್ಣ ಮಹಲದು. ನನಗೆ ನೀನು ನಿನಗೆ ನಾನು ಕೂಡಿ ಬಾಳುವ ಸುಖವದು. ಪರಸ್ಪರ ಒಪ್ಪಿಕೊಂಡು ಬಾಳುವ ಬಿಡದ ಬೆಸುಗೆ ಅದು. ಮೋಡ ಮಳೆ ಗಗನ ಭೂಮಿ ನದಿ ಸಾಗರ ಪ್ರಾಣಿ ಪಕ್ಷಿಗಳಲ್ಲಿನ ನಿಸ್ವಾರ್ಥ ನಿರ್ಲಿಪ್ತ ನಿರ್ಮೋಹ ಪ್ರೀತಿ ನಮ್ಮದಾಗಲಿ.

ಎಲ್ಲರಲ್ಲಿಯೂ ಪೂರ್ಣತೆ ಎಂಬುದೇನು ಇರದು. ಚಂದ್ರನಿಗು ಕಲೆಗಳಿವೆ ಸೂರ್ಯನಿಗೂ ಕಪ್ಪು ಕುಳಿಗಳಿವೆ. ಭೂಮಿಗೂ ಅಂಕು ಡೊಂಕು ತಗ್ಗು ದಿಣ್ಣೆಗಳಿವೆ. ಸೃಷ್ಟಿಯ ಯಾವ ರಚನೆಯೂ ಪರಿಪೂರ್ಣವಲ್ಲ. ಎಲ್ಲವೂ ಪೂರ್ಣತೆಯೆಡೆ ಸಾಗುವಲ್ಲಿನ ಒಂದು ಪ್ರಯತ್ನಗಳಷ್ಟೆ. ಪ್ರೀತಿಸುವ ಪ್ರೀತಿಸಲ್ಪಡುವ ಜೀವಗಳಲ್ಲಿ ಅಕ್ಕರೆ ಕಾಳಜಿಗಳಿದ್ದರೆ ಅದೇ ಪ್ರೀತಿಯ ಧನ್ಯತೆ. ಲೋಕದ ಒಳಿತಿನೆಲ್ಲದರ ಪೂಜ್ಯತೆ. ಪ್ರೀತಿ ಇಲ್ಲದ ಮೇಲೆ ಮಾತಿಗೆ ಮಾತು ಕೂಡೀತು ಹೇಗೆ? ಅರ್ಥ ಹುಟ್ಟೀತು ಹೇಗೆ? ಜಾತಿಮತ ಭಾಷೆ ಬಣ್ಣ ಗೋಡೆಗಳ ನಡುವೆ ನರಳುವ ಪಾಡು ತಪ್ಪೀತು ಹೇಗೆ? ಅಲ್ಲವೇ...? ಪ್ರೀತಿಯಿರಲಿ ನಮ್ಮ ನಿಮ್ಮ ನಡುವೆ!



» ಲೇಖನ
ಟಿ.ಪಿ.ಉಮೇಶ್,
ರಾಷ್ಟ್ರಪ್ರಶಸ್ತಿ ಪುರಸ್ಕೃತ ಶಿಕ್ಷಕರು, ತುಪ್ಪದಹಳ್ಳಿ,
ಹೊಳಲ್ಕೆರೆ .ತಾ.
9008461178

## ಶಾಲೆಯಲ್ಲಿ ಆಯೋಜಿಸಲಾಗಿದ್ದ ಪ್ರಬಂಧ, ರಂಗೋಲಿ ಸ್ಪರ್ಧೆ ಹಾಗೂ ಕಲ್ಯಾಣಿಯಲ್ಲಿ ಶ್ರಮಧಾನ

» ಹೊಸದುರ್ಗ

ಸ್ವಚ್ಛ ಹೀ ಸೇವಾದಡಿ ಶುಕ್ರವಾರ ಪಟ್ಟಣದ ಹಲವು ಶಾಲೆಯಲ್ಲಿ ಪ್ರಬಂಧಮತ್ತುವಾರ್ಡ್‌ಮಟ್ಟದಲ್ಲಿ ರಂಗೋಲಿ ಸ್ಪರ್ಧೆ, ವಿದ್ಯಾರ್ಥಿಗಳ ವಸತಿ ನಿಲಯಗಳಲ್ಲಿ ಹಾಗೂ ಕಲ್ಯಾಣಿಯಲ್ಲಿ ಶ್ರಮ ಧಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು ಈ ಸಂಧರ್ಬದಲ್ಲಿ ಮಾತನಾಡಿದ ಪುರಸಭಾ ಮುಖ್ಯಾಧಿಕಾರಿ ತಿಮ್ಮರಾಜು ಜಿ.ವಿ. ಸೆ.14 ರಿಂದ ಅ.2 ರವರೆಗೆ ಕಾರ್ಯಕ್ರಮಗಳನ್ನ ಆಯೋಜನೆ ಮಾಡಲಾಗಿದ್ದು ರಂಗೋಲಿಸ್ಪರ್ಧೆ, ಶಾಲೆಯಲ್ಲಿ ಕ್ವಿಜ್, ಪ್ರಬಂಧ ಸ್ಪರ್ಧೆ ಹಾಗೂ




ಅಮ್ಮನ ಹೆಸರಿನಲ್ಲಿ ಒಂದು ಗಿಡ ನೆಡುವುದು ಹಾಗೂ ಸ್ವಚ್ಛತಾ ಪ್ಲೆಡ್ಜ್ ಕಾರ್ಯಕ್ರಮ ಇನ್ನೂ ಇತರೆ ಸ್ವಚ್ಛತೆಯ ಸೇವಾ ಅಭಿಯಾನವನ್ನು ಅನುಷ್ಠಾನಗೊಳಿಸಲು ಸ್ವಭಾವ ಸ್ವಚ್ಛತೆ, ಸಂಸ್ಕಾರ ಸ್ವಚ್ಛತೆ ಘೋಷವಾಕ್ಯದಡಿ ಶಾಲೆ ಮತ್ತು ವಸತಿ ನಿಲಯ, ಕಲ್ಯಾಣಿಯಲ್ಲೆ ಪ್ರಬಂಧ, ಶ್ರಮಧಾನ ಹಾಗೂ ರಂಗೋಲಿ ಬಿಡಿಸುವುದರ ಮೂಲಕ ಸ್ವಚ್ಛತೆ ಬಗ್ಗೆ ಅರಿವು ಮೂಡಿಸಿ ಹಾಗೂ ಸಾಂಕ್ರಾಮಿಕ ರೋಗಗಳ ಬಗ್ಗೆ ವಿವರವಾಗಿ ತಿಳಿಸಿ ಆರೋಗ್ಯ ಸಂರಕ್ಷಣಾ ಸಂದೇಶವನ್ನ ನೀಡಲಾಗುವುದು ಎಂದರು.ಈ ಸಂಧರ್ಬದಲ್ಲಿ ಪುರಸಭಾ ಅಧ್ಯಕ್ಷೆ ಶ್ರೀಮತಿ ರಾಜೇಶ್ವರಿ ಆನಂದ್ ಉಪಾಧ್ಯಕ್ಷೆ ಶ್ರೀಮತಿ ಗೀತಾ ಆಸಂಧಿ, ಸದಸ್ಯರಾದ ರಾಮಚಂದ್ರಪ್ಪ, ಶ್ರೀಮತಿ ಜ್ಯೋತಿ ಕೆಂಚಪ್ಪ, ಶ್ರೀಮತಿ ಗಿರಿಜಮ್ಮ, ಹೆಚ್. ರಾಮಚಂದ್ರಪ್ಪ ಹಾಗೂ ಶ್ರೀಮತಿ ದಾಳಿಂಬೆ ಗಿರೀಶ್ ಹಾಗೂ ಪುರಸಭೆಯ ಸಿಬ್ಬಂದಿಗಳಾದ ಆರೋಗ್ಯ ನಿರೀಕ್ಷಕರಾದ ಬಸವರಾಜ , ಕಲ್ಪನಾ ಟಿ, ಸಾವಿತ್ರಿ ಎನ್, ಗೀತಾ, ವಿಕಾಸ್, ಕುಮಾರ್, ರಾಜೇಶ್ ಇನ್ನಿತರೆ ಸಿಬ್ಬಂದಿಗಳು ಹಾಗೂ ಪೌರಕಾರ್ಮಿಕರು ಹಾಗೂ ಶಾಲಾ ಮಕ್ಕಳು ಮತ್ತು ಶಾಲಾ ಶಿಕ್ಷಕರು ಹಾಗೂ ಸಾರ್ವಜನಿಕರು ಹಾಜರಿದ್ದರು.

## ಒಮ್ಮೆ ಶಿಕ್ಷಕರಾದವರು ಜೀವನ ಪರ್ಯಂತ ಶಿಕ್ಷಕ

» ಹೊಸದುರ್ಗ

ವಿದ್ಯಾರ್ಥಿಗಳನ್ನು ಉತ್ತಮ ಪ್ರಜೆಗಳನ್ನಾಗಿ ರೂಪಿಸುವ ಶಿಕ್ಷಕರ ಕೊಡುಗೆದೊಡ್ಡದು ಒಮ್ಮೆ ಶಿಕ್ಷಕರಾದವರು ಜೀವನ ಪರ್ಯಂತ ಶಿಕ್ಷಕರಾಗಿರುತ್ತಾರೆ ಎಂದು ವಸತಿ ಶಾಲೆಗಳ ಜಿಲ್ಲಾ ಸಮನ್ವಯಅಧಿಕಾರಿ ಮಂಜಣ್ಣ ಹೇಳಿದರು.

ಪಟ್ಟಣದ ವಿಸ್ಮಯ ಅರ್ಗಾನಿಕ್ ಸಭಾಂಗಣದಲ್ಲಿ ತಾಲೂಕು ವಸತಿ ಶಾಲೆಗಳ ಪ್ರಾಂಶುಪಾಲರ ವತಿಯಿಂದ ಆಯೋಜಿಸಲಾಗಿದ್ದ ಶಿಕ್ಷಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಸಮಾಜಕ್ಕೆ ಒಂದಲ್ಲಾ ಒಂದು ರೀತಿಯಲ್ಲಿ ಮಾರ್ಗದರ್ಶನ ಮಾಡುತ್ತಾರೆ. ಶಿಕ್ಷಕ ವೃತ್ತಿ ಅತ್ಯಂತ ಶ್ರೇಷ್ಠವಾದದ್ದು, ಬದುಕಿನಲ್ಲಿ ನಮಗೆ ಮಾರ್ಗದರ್ಶನ ಮಾಡಿದ ಶಿಕ್ಷಕರು ಸ್ಮರಣೀಯ. ಅವರನ್ನು ಗೌರವಿಸುವುದು ಸಮಾಜದ ಕರ್ತವ್ಯ ಎಂದರು.



ವಸತಿ ಶಾಲೆಗಳ ಪ್ರಾಂಶುಪಾಲರ ಸಂಘದ ಜಿಲ್ಲಾಧ್ಯಕ್ಷ ಮಹೇಶ ಅಂಗಡಿ, ಜಿಲ್ಲಾ ಉತ್ತಮ ಶಿಕ್ಷಕ ಪ್ರಶಸ್ತಿ ವಿಜೇತ ಮೆಂಗಸಂದ್ರ ಧನಂಜಯ ಮಾತನಾಡಿದರು. ಹೆಚ್.ಎಸ್.ನವೀನ್‌ಕುಮಾರ್ ಉಪನ್ಯಾಸ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲ ಜ್ಯೋತಿ ವಹಿಸಿದ್ದರು. ಬೊಮ್ಮನಹಳ್ಳಿ ವಸತಿ ಶಾಲೆ ಪ್ರಾಂಶುಪಾಲ ರಮೇಶ್, ನಾಯಿಗೆರೆ ವಸತಿ ಶಾಲೆ ಪ್ರಾಂಶುಪಾಲ ಮಂಜುನಾಥ, ವೆಂಕಟೇಶ್ ನಾಯಕ, ಸಂಗೀತ ಶಿಕ್ಷಕಿ ಕೆ.ದಾಕ್ಷಾಯಿಣಿ ಮತ್ತಿತರಿದ್ದರು.

Printed by: GOVINDAPPA.T Published by: DARSHAN.T Owned by: DARSHAN.T and Printed at: ASHAYA PRINTERS No.94, C.M.C. Colony, Yangammana Katte, Chitradurga-577 501, Chitradurga Dist, Karnataka state. Published at : No. 55 Ingaladal Main Street, Near Canara Banak , Ingaladal Village, Ingaladal Post - 577524, Chitradurga Tq, Chitradurga Dist, Karnataka state. Editor : DARSHAN.T